25 MARCH 1995

ಉಪಾಧ್ಯಕ್ಷರು :- ತಮ್ಮ ಸೂಚನೆಯನ್ನು ಗಮನಿಸುತ್ತೇನೆ.

ಹುಬ್ಬಳ್ಳಿ ನಗರದಲ್ಲಿ ದಿನಾಂಕ: 21-3-1995ರಂದು ಹೋಳಿ ಹಬ್ಬದ ಸಂದರ್ಭದಲ್ಲಿ ನಡೆದ ಘಟನೆಯ ಬಗ್ಗೆ ಮಾನ್ಯ ಗೃಹ ಸಚಿವರಿಂದ ಹೇಳಿಕೆ:

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು) :- ಸನ್ಮಾನ್ಯ ಉಪಾಧ್ಯಕ್ಷರೇ, ಈ ಒಂದು ಹೇಳಿಕೆಯನ್ನು ಕೊಡುವುದರಲ್ಲಿ ತಡವಾಗಿರುವುದಕ್ಕೆ ವಿಷಾದಿಸುತ್ತೇನೆ. ನಾನು ನಡೆದಿರುವ ಘಟನೆಯ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಈಗ ನಡೆದಿರುವ ಘಟನೆಯ ಬಗ್ಗೆ ನಾನು ಮತ್ತು ಉನ್ನತ ಅಧಿಕಾರಿಗಳು ವೀಕ್ಷಿಸಿ ಮಾಡಿರತಕ್ಕ ವಿಚಾರಗಳ ಬಗ್ಗೆ, ಈ ಒಂದು ಸಂಗತಿಯನ್ನು ತಮ್ಮ ಮೂಲಕ ಸದನದಲ್ಲಿ ಇಡುತ್ತಿದ್ದೇನೆ.

ದಿನಾಂಕ 21-3-1995 ರಂದು ಮಧ್ಯಾಹ್ನ 1-15ರ ಸಮಯದಲ್ಲಿ ಹುಬ್ಬಳ್ಳಿಯ ಕಮರಿಪೇಟೆ ಪ್ರದೇಶದಲ್ಲಿ ಹೋಳಿ ಮೆರವಣಿಗೆ ಹಾಗೂ ಕಾಮದಹನವಾದ ನಂತರ ಮುಲ್ಲಾರ್ ಓಣಿ ಮಸೀದಿ ಬಳಿ ಕೆಲವರು ಹೋಳಿಯ ಬಣ್ಣ ಎರಚುತ್ತಾ ಹಬ್ಬ ಆಚರಿಸುತ್ತಿದ್ದರು. ಆ ಸಂದರ್ಭದಲ್ಲಿ ಇವರು ಬಣ್ಣ ಎರಚುವುದನ್ನು ಮತ್ತು ಇವರ ಅತಿರೇಕದ ವರ್ತನೆಯನ್ನು ಸಹಿಸದ ಒಬ್ಬ ವ್ಯಕ್ತಿ ಇದನ್ನು ಪ್ರತಿಭಟಿಸಿದಾಗ ಅಲ್ಲಿ ಎರಡು ಗುಂಪುಗಳು ಸೇರಿ ಅವರೊಳಗೇ ವಾದ ವಿವಾದಗಳಾದವು. ಈ ಕಮರಿಪೇಟೆ ಪ್ರದೇಶದ ವಿವಿಧ ಕೋಮುಗಳ ಜನರು ಒಟ್ಟಿಗೆ ವಾಸಿಸುತ್ತಿದ್ದಾರೆ. ಈ ಗಲಭೆಯನ್ನು ಕೇಳಿ ಜನರು ದೊಡ್ಡ ಸಂಖ್ಯೆಯಲ್ಲಿ ಅವರವರ ಮನೆಗಳಿಂದ ಹೊರಬಂದರು. ಆಗ ಅಲ್ಲಿ ಕಲ್ಲು ತೂರಾಟವಾಯಿತು. ಈ ಕಲ್ಲು ತೂರಾಟದ ನಡುವೆ ಮಸೀದಿಯೊಳಗೆ ಇದ್ದ ಒಬ್ಬ ವ್ಯಕ್ತಿ ಹೊರ ಬಂದು ಓಡಿದನು. ಹೋಳಿ ಹಬ್ಬ ಆಚರಿಸುತ್ತಿದ್ದವರಲ್ಲಿ ಹೆಚ್ಚಿನವರು ಮುಕ್ಕಾಲು ಭಾಗ ಪಾನಮತ್ತರಾಗಿದ್ದರು. ಇವರು ಆ ವ್ಯಕ್ತಿಯನ್ನು ಸೆಳೆದೊಯ್ದು ಚೆನ್ನಾಗಿ ಥಳಿಸಿದರು. ಇದನ್ನು ನೋಡಿದ ಕೂಡಲೇ ಸಮಾಜಘಾತುಕ ಶಕ್ತಿಗಳು ಚುರುಕಾಗಿ ಇರಿತ, ಕಲ್ಲು ತೂರಾಟ ಮುಂತಾದುವುಗಳಲ್ಲಿ ತೊಡಗಿದಾಗ, ಪೋಲೀಸರು ಅಶ್ರುವಾಯು ಷೆಲ್ಲುಗಳನ್ನು ಸಿಡಿಸಿದರು, ಹಾಗೂ ಸಮಾಜ ವಿರೋಧಿ ಶಕ್ತಿಗಳನ್ನು ಲಾಠಿ ಪ್ರಹಾರದಿಂದ ಚದುರಿಸಲು ಪ್ರಯತ್ನಪಟ್ಟರು. ಆದರೆ, ಗಲಭೆಕೋರರ ಗುಂಪು ಇದಕ್ಕೆ ಜಗ್ಗದುದರಿಂದ, ಆಗ ಪೋಲೀಸರು ಗುಂಡನ್ನು ಹಾರಿಸಬೇಕಾಯಿತು. ಇದರ ಪರಿಣಾಮವಾಗಿ ಸತೀಶ್ ದಯಾನಂದ್ ಎಂಬ ವ್ಯಕ್ತಿ ಗುಂಡೇಟಿನಿಂತ ಮೃತನಾದನು, ಹಾಗೂ 5 ಜನರು ಗಾಯಗೊಂಡರು. ಗಲಭೆಕೋರರ ಗುಂಪು ಅಗ್ನಿ ಸ್ಪರ್ಶದಲ್ಲಿ ತೊಡಗಿ, ಕೆಲವು ಅಂಗಡಿಗಳಿಗೆ ಬೆಂಕಿ ಕೊಟ್ಟರು. ಸುಮಾರು 4-30 ಗಂಟೆಯ ಹೊತ್ತಿಗೆ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಗಲಭೆಪೀಡಿತ ಪ್ರದೇಶಗಳಾದ ಹಳೆ ಹುಬ್ಬಳ್ಳಿಯ ಕಮರಿಪೇಟೆ ಮತ್ತು ಕಸಬ ಪೇಟೆಗಳು ಶಾಂತ ಸ್ಥಿತಿಗೆ ಮರಳಿದವು.

ಮೇಲಿನ ಸಂದರ್ಭದಲ್ಲಿ, ಅನೇಕ ಘಟನೆಗಳಲ್ಲಿ ಒಬ್ಬ ಇರಿತದಿಂದ ಸತ್ತು, ಒಬ್ಬ ಪೋಲೀಸರು ಹಾರಿಸಿದ ಗುಂಡಿನಿಂದ ಸತ್ತಿದ್ದಾನೆ. 5 ಜನರಿಗೆ ಗುಂಡೇಟಿನಿಂದ

ಗಾಯಗಳಾಗಿವೆ. 19 ಜನರಿಗೆ ಇರಿತ ಹಾಗೂ ಕಲ್ಲೇಟಿನ ಗಾಯಗಳಾಗಿವೆ. ಐದು ಆಟೋರಿಕ್ಷಾಗಳು ಹಾಗೂ ಒಂದು ಕಾರಿಗೆ ಬೆಂಕಿ ಕೊಡಲಾಗಿದೆ. ಒಂದು ಗೂಡು ಅಂಗಡಿ, ಒಂದು ಸೌದೆ ಅಂಗಡಿ ಹಾಗೂ ಮೂರು ಡಬ್ಬಿ ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿದೆ.

ಸಂಜೆ 4-30 ಗಂಟೆಯ ಮೇಲೆ ಪರಿಸ್ಥಿತಿ ನಿಯಂತ್ರಣಕ್ಕೆ ಬಂದ ಮೇಲೆ ಗಲಭೆ ಪೀಡಿತ ಪ್ರದೇಶದಲ್ಲೆಲ್ಲಾ, ತೀವ್ರವಾದ ಗಸ್ತನ್ನು ಏರ್ಪಡಿಸಲಾಯಿತು. ಕೆ.ಎಸ್.ಆರ್.ಪಿ.ಯ 9 ಪ್ಲಟೂನುಗಳನ್ನು ಮತ್ತು ಧಾರವಾಡದಿಂದ 100 ಪೋಲೀಸ್ ಸಿಬ್ಬಂದಿಯನ್ನು ತರಿಸಿಕೊಂಡು ಅವರನ್ನೆಲ್ಲಾ, ಆಯಕಟ್ಟಿನ ಸ್ಥಳದಲ್ಲಿ ಇರಿಸಲಾಯಿತು. ಧಾರವಾಡ ಬೆಳಗಾವಿ ಪೋಲೀಸ್ ಅಧೀಕ್ಷಕರು ಹಾಗೂ ಇನ್ಸ್‌ಪೆಕ್ಟರ್‌ಗಳನ್ನು ಬಂದೋಬಸ್ತ್ ಬಳಸಿಕೊಳ್ಳಲಾಯಿತು. ಅಂದು ರಾತ್ರಿ ಬಲವಾದ ಪಹರೆ ಗಸ್ತನ್ನು ಏರ್ಪಡಿಸಿದ್ದರಿಂದ, ಇಡೀ ರಾತ್ರಿ ಯಾವ ಘಟನೆಗಳು ಸಂಭವಿಸಲಿಲ್ಲ.

ದಿನಾಂಕ 22ರ ಮಧ್ಯಾಹ್ನ ಮಹಜನ ಮತ್ತು ಮರಣೋತ್ತರ ಪರಿಕ್ಷೆಗಳನ್ನು ನಡೆಸಿದ ಮೇಲೆ, ಇರಿತದಿಂದ ಸತ್ತ ಅಫೀಜ್ ಅಯಾನುಲ್ಲಾ ಹಾಗೂ ಪೋಲೀಸ್ ಗುಂಡೇಟಿನಿಂದ ಸತ್ತ ಸತೀಶ್ ದಯಾನಂದ ರವರ ಶರೀರಗಳನ್ನು ಅವರ ಬಂಧುಗಳಿಗೆ ಬಿಟ್ಟು ಕೊಡಲಾಯಿತು. ಹಫೀಜ್ ಅಯಾನುಲ್ಲಾ ಮಸೀದಿಗೆ ಸೇರಿದ ಮುದ್ರಣ ಶಾಲೆಯ ಬೋಧಕನಾಗಿದ್ದುದರಿಂದ, ಮುಲ್ಲಾರ್ ಓಣಿ ಮಸೀದಿಯಲ್ಲಿ ಆತನಿಗೆ ಅಂತಿಮ ಗೌರವವನ್ನು ಸಲ್ಲಿಸಲು ಜನಗಳ ಭಾರಿ ಗುಂಪೇ ಜಮಾಯಿಸಿತು. ಬಲವಾದ ಪೋಲೀಸ್ ಬಂದೋಬಸ್ತ್ ಮಾಡಿದುದರಿಂದ, ಮೃತನ ಅಂತ್ಯಸಂಸ್ಕಾರ ಶಾಂತವಾಗಿ ನೆರವೇರಿತು. ಆದರೆ, ಆ ಸಮಯದಲ್ಲಿ ನಗರದ ಇತರ ಕೆಲವು ಭಾಗಗಳಲ್ಲಿ ಪರಿಸ್ಥಿತಿಯು ಪ್ರಕ್ಷುಬ್ಧವಾಗಿತ್ತು. ಹುಬ್ಬಳ್ಳಿಯ ನಗರ ಪೋಲೀಸ್ ಠಾಣೆಯ ಸರಹದ್ದಿನಲ್ಲಿ ಸಮಾಜಘಾತು ಶಕ್ತಿಗಳಿಂದ ಎರಡು ಅಂಗಡಿಗಳಿಗೆ ಮತ್ತು ಗಣೇಶಪೇಟೆ ಭಾಗದ ಒಂದು ಮಧ್ಯದ ಅಂಗಡಿಗೆ ಬೆಂಕಿ ಇಟ್ಟರು. ಹುಬ್ಬಳ್ಳಿ ನಗರದ ಇತರ ಭಾಗಗಳಲ್ಲಿ 2-30 ಗಂಟೆಯವರೆಗೆ ಕಲ್ಲು ತೂರಾಟದ ಘಟನೆಗಳನು ವರದಿಯಾದವು. ಮಧ್ಯಾಹ್ನ 2-30 ಗಂಟೆಯಿಂದ 3-00 ಗಂಟೆಯವರೆಗಿನ ಅವಧಿಯಲ್ಲಿ ಮತ್ತೆ ಎರಡು ಇರಿತದ ಘಟನೆಗಳು ವರದಿಯಾದವು. ಆದರೆ, ಬಲವಾದ ಗಸ್ತನ್ನು ಏರ್ಪಡಿಸಿದ್ದುದರಿಂದ, ಪರಿಸ್ಥಿತಿಯು ನಿಯಂತ್ರಣಕ್ಕೆ ಬಂದಿತು. ಆದರೂ, ಮುಂದೆ ಇಂತಹ ಘಟನೆಗಳು ಆಗದಂತೆ ತಡೆಗಟ್ಟಲು ಮುಂಜಾಗ್ರತೆಯ ದೃಷ್ಟಿಯಿಂದ ಸಂಜೆ 6 ಗಂಟೆಯ ಮೇಲೆ 36 ಗಂಟೆಗಳ ಅವಧಿಯವರೆಗೆ ಕಸಬಪೇಟೆ, ಕಮರಿಪೇಟೆ ಮತ್ತು ಹುಬ್ಬಳ್ಳಿ ನಗರದ ಮೂರು ಠಾಣೆಗಳ ವ್ಯಾಪ್ತಿಯಲ್ಲಿ ಕರ್ಫ್ಯೂ ವಿಧಿಸಲಾಯಿತು.

ದಿನಾಂಕ 23-3-1995ರಂದು ಹುಬ್ಬಳ್ಳಿಯಲ್ಲಿ ಪರಿಸ್ಥಿತಿಯು ಸಾಮಾನ್ಯವಾಗಿ ಸಹಜವಾಗಿದ್ದು ನಿಷೇಧಾಜ್ಞೆಯನ್ನು ಉಲ್ಲಂಘಿಸುವ ಒಂದು ಘಟನೆ ನಡೆಯಿತು. ಇದರಲ್ಲಿ ಗುಂಪನ್ನು ಚದುರಿಸಲು ಪೋಲೀಸರು ಅಶ್ರುವಾಯುವನ್ನು ಬಳಸಬೇಕಾಯಿತು. ಮತ್ತೆ ಯಾವುದೇ ಇರಿತ ಘಟನೆ ಸಂಭವಿಸಲಿಲ್ಲ. ಅಂದು ರಾತ್ರಿ ಮಾತ್ರ ಒಂದು ಮುಚ್ಚಿದ್ದ ವಿದ್ಯುತ್ ಉಪಕರಣಗಳ ಅಂಗಡಿಯಲ್ಲಿ ಬೆಂಕಿ

ಕಾಣಿಸಿಕೊಂಡಾಗ ಅಗ್ನಿಶಾಮಕ ದಳದವರು ಅದನ್ನು ನಂದಿಸಿದರು. ಬೆಂಕಿಯ ಕಾರಣದ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಮಧ್ಯರಾತ್ರಿಯಲ್ಲಿ ಕಿಡಿಗೇಡಿಗಳು ಸೋಡಾ ಬಾಟಲ್‌ಗಳನ್ನು ಮನೆಯೊಂದರ ಮೇಲೆ ಬಿಸಾಡಿದ ಘಟನೆ ನಡೆದಿದ್ದು ಪೋಲೀಸರು ಸ್ಥಳಕ್ಕೆ ಧಾವಿಸಿ ಸೂಕ್ತ ಕ್ರಮ ತೆಗೆದುಕೊಂಡರು.

ದಿನಾಂಕ 23-3-1995 ರಂದು 235 ಕಿಡಿಗೇಡಿಗಳನ್ನು ಬಂಧಿಸಲಾಯಿತು. ಕರ್ಫ್ಯೂವನ್ನು 25-3-1995ರ ಬೆಳಿಗ್ಗೆ 0600ರ ವರೆಗೆ ವಿಸ್ತರಿಸಲಾಗಿದೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ.

ಮೃತಪಟ್ಟ ಕುಟುಂಬದವರಿಗೆ ತಲಾ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನ ಕೊಡಲಾಗಿದೆ ಮತ್ತು ಕೊಡಲಾಗುತ್ತಿದೆ, ಮತ್ತು ಗಾಯಗೊಂಡ 24 ಜನರಿಗೆ ತಲಾ ರೂ. 15,000-00 ಕೊಡಲಾಗುತ್ತಿದೆ. ಆಸ್ತಿಪಾಸ್ತಿ ನಷ್ಟದ ಬಗ್ಗೆ ಉಪ ವಿಭಾಗಾಧಿಕಾರಿಗಳು ಅಂದಾಜು ಮಾಡುತ್ತಿದ್ದಾರೆ. ಅವರಿಗೂ ಸಹ ಸೂಕ್ತ ಪರಿಹಾರ ನೀಡಲಾಗುವುದು.

23-3-1995ರಂದು ನಡೆದ ಸಚಿವ ಸಂಪುಟ ಈ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆಗೆ ಒಪ್ಪಿಸಲು ನಿರ್ಧಾರ ಕೈಗೊಂಡಿದೆ. ಇದುವರೆಗೆ ನಾಲ್ಕು ಜನ ಸತ್ತಿದ್ದು 24 ಜನ ಗಾಯಾಳುಗಳಾಗಿದ್ದಾರೆ.

ಈಗ ಇರತಕ್ಕ ಪರಿಸ್ಥಿತಿಯಲ್ಲಿ ಇವತ್ತು ಬೆಳಿಗ್ಗೆ ಆರು ಗಂಟೆಗೆ ಅಲ್ಲಿನ ಕರ್ಫ್ಯೂವನ್ನು ರದ್ದು ಮಾಡಿದ್ದೇವೆ. ಪರಿಸ್ಥಿತಿ ಅಲ್ಲಿ ಈಗ ಸಂಪೂರ್ಣವಾಗಿ ಹತೋಟಿಯಲ್ಲಿದೆ. ಇದಕ್ಕೆ ಸಂಬಂಧಪಟ್ಟಂತೆ ಇದುವರೆಗೆ ಐದುನೂರು ಜನರನ್ನು ಬಂಧಿಸಲಾಗಿದೆ. 37 ಜನರಿಗೆ ಗಾಯಗಳಾಗಿವೆ. ಇರಿತ ಮತ್ತು ಗುಂಡೇಟಿನಿಂತ ನಾಲ್ಕು ಜನರು ಸತ್ತಿದ್ದಾರೆ.

ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಾಳೆಗುಡ್ಡೆ ಎನ್ನುವವರ ಮನೆಯ ಮೇಲೆ ದಾಳಿಯಾಗಿದೆ ನೀವು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳಿದ್ದಾರೆ. ಕಾಳೆಗುಡ್ಡೆ ಎನ್ನುವವರು ಸ್ವತ: ನನ್ನನ್ನು ಭೇಟಿ ಮಾಡಿದ್ದರು. ಅವರ ಮನೆಯ ಮೇಲೆ ಕಲ್ಲಿನ ತೂರಾಟ ಆಗಿದ್ದು ನಿಜ, ಅವರೆಲ್ಲರಿಗೂ ಸಹ ರಕ್ಷಣೆಯನ್ನು ಕೊಡಲಿಕ್ಕೆ ನಾವು ಸಾಕಷ್ಟು ಬಂದೋಬಸ್ತನ್ನು ಮಾಡಿದ್ದೇವೆ. ಮತ್ತು ಕೇಂದ್ರೀಯ ಮೀಸಲು ಪೋಲೀಸ್ ಯಾವಾಗ ಅಲ್ಲಿಗೆ ಬಂದಿದೆ, ಎಷ್ಟು ಬಂದಿದೆ ಎಂದು ಕೇಳಿದ್ದಾರೆ. ಕೇಂದ್ರಿಯ ಮೀಸಲು ಪೋಲೀಸ್‌ನ ಎರಡು ಬೆಟಾಲಿಯನ್‌ಗಳು ಬಂದಿದೆ. ಕೇಂದ್ರ ಸರ್ಕಾರದವರು ನಮ್ಮ ಮನವಿಯ ಮೇರೆಗೆ ಕಳುಹಿಸಕೊಟ್ಟಿದ್ದಾರೆ. ಒಂದು ಬೆಟಾಲಿಯನೂ ತ್ರಿವೆಂಡ್ರಂನಿಂದ ಹೊರಟು ಮಂಗಳೂರಿನ ಮೂಲಕ ನಿನ್ನೆ ದಿನ ಬಂದಿದೆ; ಅವರು ಈಗಾಗಲೇ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. Rapid Action Force ನವರು ಇನ್ನೊಂದು ಬೆಟಾಲಿಯನ್‌ನವರು ಮುಂಬೈನಿಂದ ಹೊರಟು ಬೆಳಗಾವಿಯ ಮೂಲಕ ಬಂದಿದ್ದಾರೆ. ಈಗ ಪರಿಸ್ಥಿತಿ ಸಂಪೂರ್ಣವಾಗಿ ನಿಯಂತ್ರಣದಲ್ಲಿದೆ. ಇದಲ್ಲದೆ ಬೆಳಗಾವಿ, ಬೀದರ್, ಧಾರವಾಡ ಮತ್ತು ಇತರೇ

ಜಿಲ್ಲೆಗಳಿಂದ ಪೋಲೀಸ್ ಸಿಬ್ಬಂದಿಗಳನ್ನು ಮತ್ತು ಉನ್ನತ ಅಧಿಕಾರಿಗಳನ್ನು ಕರೆಸಿಕೊಂಡು ಠಾಣಾವಾರು ಪರಿಸ್ಥಿತಿಯನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮತ್ತು ಇವತ್ತು ಬೆಳಿಗ್ಗೆ ಸ್ಥಳೀಯ ಶಾಸಕರು ಉಪವಾಸ ಸತ್ಯಾಗ್ರಹ ಸಹ ಮಾಡುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದರಲ್ಲಿ ಒಂದು ಅಂಶ ಕ್ಲಿಯರ್ ಆಗಲಿಲ್ಲ. ಕಾಳೆಗುಡ್ಡೆ ಎನ್ನುವವರ ಮನೆಯ ಮೇಲೆ ಕಲ್ಲನ್ನು ಹಾಕಿದ್ದಾರೆ ಎನ್ನುವ ಬಗ್ಗೆ ಹೇಳಿದ್ದೀರಿ. ಆದರೆ ಅವರ ಅಂಗಡಿಯನ್ನು ಸುಟ್ಟು ಹಾಕಿರುವ ಬಗ್ಗೆ ಹೇಳಲಿಲ್ಲ. ಇಬ್ಬರು ಸ್ಥಳೀಯ ಶಾಸಕರು ತಾಲ್ಲೂಕು ಕಚೇರಿಯ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಅದು ತಮಗೂ ಸಹ ಗೊತ್ತಿದೆ. ಇದರ ಬಗ್ಗೆ ಸಹ ತಾವು ಹೇಳಲಿಲ್ಲ. ಅವರು ಏಕೆ ಸತ್ಯಾಗ್ರಹ ಕುಳಿತುಕೊಂಡಿದ್ದಾರೆ ಮತ್ತು ಇವತ್ತು ಅನಾವಶ್ಯಕವಾಗಿ ಅನೇಕ ಜನರನ್ನು ಅರೆಸ್ಟ್ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ವರದಿ ಬಂದಿದೆ. ಸುಮಾರು 600 ರಿಂದ 700 ಜನರಿಗೆ ಅರೆಸ್ಟ್ ಮಾಡಿದ್ದಾರೆಂದು ತಿಳಿದು ಬಂದಿದೆ. ತಾವೇ 500-600 ಎಂದು ಹೇಳಿದ್ದೀರಿ. ಅರೆಸ್ಟ್ ಮಾಡಿದ ಮೇಲೆ ಪರಿಸ್ಥಿತಿ ಇನ್ನೂ ಬಿಗಡಾಯಿಸಬಾರದು. ಆ್ಯಂಟಿ ಸೋಷಿಯಲ್ ಎಲಿಮೆಂಟ್ ನಿಜವಾಗಿಯೂ ಅಲ್ಲಿದ್ದರೆ ಅಂತಹವರಿಗೆ ನೀವು ಹಿಡಿದು ಹಾಕಿದರೆ ಪರವಾಗಿಲ್ಲ. ಇದೇ ಸಂದರ್ಭದಲ್ಲಿ ಬೇಕಾದವರು,ಬೇಡಾದವರು ಎಲ್ಲಾ ಸೇರಿ ಸಾರಾ ಸಗಟು ಮಾಡಿಕೊಂಡು ಹೋದರೆ ಅದರದ್ದು ಪರಿಣಾಮ ಬೇರೆ ಆಗುತ್ತದೆ. ಇದರ ಬಗ್ಗೆ ಸ್ಪಷ್ಟವಾದಂತಹ ಮಾಹಿತಿ ಹೇಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಕಾಳೆಗುಡ್ಡೆಯವರು ನಗೆ ಭೇಟಿಯಾದ ಸಂದರ್ಭದಲ್ಲಿ ಅಥವಾ ನನಗೆ ಬಂದ ವರದಿ ಪ್ರಕಾರವಾಗಿ ಅವರ ಅಂಗಡಿಗೆ ಬೆಂಕಿ ಹಾಕಿಲ್ಲ. ನನಗೆ ಬಂದಿರತಕ್ಕಂತಹ ವರದಿ ಪ್ರಕಾರವಾಗಿ ಆ ರೀತಿ ಏನಾದರೂ ಇದ್ದರೆ, ನಾನು ಅದರ ಬಗ್ಗೆ ವಿಚಾರಣೆ ನಡೆಸಿ ಇನ್ನು ಹೆಚ್ಚಿನ ರಕ್ಷಣೆ ದೃಷ್ಟಿಯಿಂದ ಏನಾದರೂ ಬೇಕಾದರೆ ಮಾಡಿಕೊಡುವ ಭರವಸೆಯನ್ನು ನಾನು ಕೊಡುತ್ತೇನೆ. ಅರೆಸ್ಟ್ ಮಾಡತಕ್ಕಂತಹ ವಿಚಾರದಲ್ಲಿ ಸರ್ಕಾರದವರು, ನನ್ನ ಮಟ್ಟದಲ್ಲಾಗಲಿ, ಅಥವಾ ಮುಖ್ಯ ಮಂತ್ರಿಗಳ ಮಟ್ಟದಲ್ಲಾಗಲಿ, ನಾವು ಸಂಪೂರ್ಣವಾಗಿ ಅಲ್ಲಿರತಕ್ಕಂತಹ ಸ್ಥಳೀಯ ಉನ್ನತ ಅಧಿಕಾರಿಗಳಿಗೆ ನಾವು ಫ್ರೀ ಹ್ಯಾಂಡ್ ಕೊಟ್ಟಿದ್ದೇವೆ; ಲಾ ಅಂಡ್ ಆರ್ಡರ್ ಮೇಂಟೆನೆನ್ಸ್ ಮಾಡುವ ದೃಷ್ಟಿಯಿಂದಾಗಿ ಅದನ್ನೂ ಹೇಳಿದ್ದೇವೆ. ಹಿಂದೂಗಳಾಗಲಿ, ಕ್ರಿಶ್ಚಿಯನ್ನರಾಗಲಿ, ಮುಸಲ್ಮಾನರಾಗಲಿ ಮತ್ತೊಬ್ಬರಾಗಲಿ ಇನ್ನೋಸೆಂಟ್ ಪೀಪಲ್ಸ್ ಅನ್ನು ಅರೆಸ್ಟ್ ಮಾಡಬಾರದು ಎಂದು ನಾನು ಸ್ಪಷ್ಟವಾಗಿ ನಿರ್ದೇಶನಗಳನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ನಾವು ಬಹಳ ಖಚಿತವಾಗಿದ್ದೇವೆ. ಯಾರೂ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಬಗ್ಗೆ ರೆಕಾರ್ಡ್ ಇದೆ; ಈ ತರಹದ ಆ್ಯಕ್ಟಿವಿಟೀಸ್ ಹಿಂದೆ ಮಾಡಿದ್ದರೆ ಮಾಡಬಾರದು ಎಂದು ನಿಮಗೆ ಸಂಶಯ ಆಗಿ ಕನ್‌ವಿನ್ಸ್ ಆಗಿದೆ ಅಂತಹವರ ಮೇಲೆ ಮಾತ್ರ ನೀವು ಗಮನ ಇಡಬೇಕೆಂದು ನಾನು ಹೇಳುತ್ತೇನೆ, ಸೂಚನೆಯನ್ನು ಕೊಟ್ಟಿದ್ದೇನೆ. ಬಂಧನದಲ್ಲಿರತಕ್ಕಂತಹವರಿಗೆ ಒಳ್ಳೆಯ ಊಟ, ವಸತಿ ಕೊಡುವ

ವ್ಯವಸ್ಥೆಯನ್ನು ನಾನು ಮಾಡಿಸಿದ್ದೇನೆ. ಶಾಸಕರು ಧರಣಿ ಮಾಡುವ ವಿಚಾರದಲ್ಲಿ ಈ ಸದನಕ್ಕೆ ನಾನು ಬೆಳಿಗ್ಗೆ ಬಂದ ಮೇಲೆ ಬಂದಿರತಕ್ಕಂತಹ ವರದಿಗಳ ಪ್ರಕಾರವಾಗಿ ಪೋಲೀಸ್ ವರದಿಗಳ ಪ್ರಕಾರವಾಗಿ ಇಬ್ಬರು ಶಾಸಕರು ಅಲ್ಲಿ ಧರಣಿ ಮಾಡುತ್ತಿದ್ದಾರೆ. ನಾನು ಅವರಿಗೆ ಈ ಸದನದ ಮುಖಾಂತರ ಮನವಿ ಮಾಡುತ್ತೇನೆ, ಸ್ಥಳೀಯ ಶಾಸಕರು ಇದ್ದಾರೆ; ಆ ದೃಷ್ಟಿಯಿಂದ ಅವರು ಅಲ್ಲಿರತಕ್ಕಂತಹ ಪೋಲೀಸ್ ಅಧಿಕಾರಿಯನ್ನು ಅಮಾನತ್ತಿನಲ್ಲಿಡಬೇಕು, ಸರ್ಕಾರ ಶಾಂತ ಪರಿಸ್ಥಿತಿಯನ್ನು ತರಲಿಕ್ಕೆ ವಿಫಲವಾಗಿದೆ, ಅದಕ್ಕೆ ನಾವು ಧರಣಿ ಮಾಡುತ್ತಿದ್ದೇವೆ ಎಂಬ ನನಗೆ ವರದಿ ಬಂದಿದೆ. ನಾನು ಅವರಿಗೆ ಈ ಸದನದ ಮೂಲಕ, ಸಮ್ಮ ಮೂಲಕ, ಸರ್ಕಾರದ ಪರವಾಗಿ, ಗೃಹ ಮಂತ್ರಿಯಾಗಿ, ಮುಖ್ಯ ಮಂತ್ರಿಗಳ ಪರವಾಗಿ ಮನವಿ ಮಾಡುತ್ತೇನೆ. ದಯವಿಟ್ಟು ಧರಣಿಯನ್ನು ಕೈಬಿಟ್ಟು ಶಾಂತ ಪರಿಸ್ಥಿತಿಯನ್ನು ಕಾಪಾಡುವುದಕ್ಕೆ ಅವರು ಸಹಕಾರ ಕೊಡುವುದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಈ ಹುಬ್ಬಳ್ಳಿ ನಗರದಲ್ಲಿ ಶಾಂತ ವಾತಾವರಣ ನಿರ್ಮಾಣವಾಯಿತು ಎಂದು ಹೇಳಿ ಜನತೆಗೆ ಒಂದು ರೀತಿ ಸಂತೋಷ ಮತ್ತು ಒಳ್ಳೆಯ ವಾತಾವರಣ ಆಯಿತಲ್ಲಾ ಎನ್ನತಕ್ಕಂತಹ ಉತ್ತಮವಾದ ಸಂದರ್ಭದಲ್ಲಿ ಎಂದು ನಾವೆಲ್ಲಾ ಅಂದುಕೊಂಡಿದ್ದೆವು. ಆದರೆ ಇದ್ದಕ್ಕಿದ್ದ ಹಾಗೆ ಇನ್ನೊಂದು ದಿಕ್ಕಿನಲ್ಲಿ ಗಲಭೆ ಪ್ರಾರಂಭ ಆಗಿ ಹುಬ್ಬಳ್ಳಿ ನಗರ ಮತ್ತೆ ಅಶಾಂತ ನಗರವಾಗಿ ತಿರುಗಿದೆ. ಈ ಪರಿಸ್ಥಿತಿಗೆ ಕಾರಣ ಯಾರು ಅದು ಅತಿ ಮುಖ್ಯವಾದುದು. ಮತ್ತು ಧ್ವಜಾರೋಹಣ ಸಂದರ್ಭದಲ್ಲಿ ಪ್ರತಿ ಸಾರಿ ಇಲ್ಲಿ ಗಲಭೆ ಆಗುತ್ತಾ ಇರತಕ್ಕಂತಹ ಪರಿಸ್ಥಿತಿಯಲ್ಲಿ ಪೋಲೀಸರಿಗೆ ನೇರವಾಗಿ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ. ಅಂದಾಗ ಈ ಶಾಂತ ವಾತಾವರಣ ಮೂಡಿದ ಮೇಲೂ ಸಹ ಎಚ್ಚರಿಕೆ ವಹಿಸುವುದರಲ್ಲಿ ಪೋಲೀಸರು ಏನು ಕ್ರಮ ಕೈಗೊಂಡಿದ್ದಾರೆ. ಇದು ಸಾಮಾನ್ಯವಾಗಿ ಯಾವುದೇ ಮೆರವಣಿಗೆಯಾಗಲಿ ಏನೇ ಪರಿಸ್ಥಿತಿ ಉದ್ಭವವಾಗಲಿ, ಈಗ ತಾನೇ ಧ್ವಜಾರೋಹಣ ಘಟನೆ ಕಳೆದು ಶಾಂತ ವಾತಾವರಣ ಬಂದಿರುವಾಗ ಮುಂದೆ ಇದೇ ರೀತಿ ಶಾಂತಿಯನ್ನು ಕಾಪಾಡುವುದಕೆಡಕ ಪೋಲೀಸರು ಕೈಗೊಂಡಿರತಕ್ಕಂತಹ ಎಚ್ಚರಗಳು ಏನು ? ಎಚ್ಚರವನ್ನು ತಪ್ಪಿದಾಗ ಈ ಪರಿಸ್ಥಿತಿ ಆಯಿತು. ಈ ಎಚ್ಚರ ತಪ್ಪುವುದಕ್ಕೆ ಕಾರಣ ಏನು. ಎಚ್ಚರ ತಪ್ಪಿ ಆಗಿರುವಂತಹ ಕಾರ್ಯ ಇದು. ನನ್ನ ನೇರವಾದ ಪ್ರಶ್ನೆ ಪೋಲೀಸರು ಎಚ್ಚರವನ್ನು ತಪ್ಪಿದಾಗ ಈ ಪರಿಸ್ಥಿತಿ ಆಯಿತು. ಈ ಎಚ್ಚರ ತಪ್ಪುವುದಕ್ಕೆ ಕಾರಣ ಏನು. ಇದು ಅತ್ಯಂತ ಪ್ರಮುಖವಾಗಿ ಸರ್ಕಾರ ಹೇಳಬೇಕಾದುದು. ಎಚ್ಚರ ತಪ್ಪಿದರು ಆಮೇಲೆ ಏನಾಯಿತು, ಗೋಲಿಬಾರ್ ಆಯಿತು. ಇವತ್ತಿನ ದಿನಗಳಲ್ಲಿ ಗೋಲಿಬಾರ್ ಅಂದರೆ ಅದು ಒಂದು ರೀತಿಯಾಗಿ ಅದು ಸುಲಭವಾದ ಸಾಧನ. ಅದಕ್ಕೆ ಏನೂ ನೀತಿ ನಿಯಮಗಳು ಅನೇಕ ಇವೆ. ಯಾವುದೇ ನೀತಿ ನಿಯಮಗಳು ಇದ್ದರೆ ಅವೆಲ್ಲವನ್ನು ಗಾಳಿಗೆ ತೂರಿ ಬದಿಗೊತ್ತಿ ಒಂದೇ ಸಾರಿ ನೇರವಾಗಿ ಗುಂಡನ್ನು ಹಾರಿಸತಕ್ಕಂಥದ್ದು ಪೋಲೀಸರ ಕರ್ತವ್ಯ ಅನ್ನುವ ರೀತಿ ಇವತ್ತು ಆಗಿದೆ. ಈ ಗುಂಡು ಹಾರಿಸುವುದಕ್ಕೆ ಅನೇಕ ವಿಧಿ ವಿಧಾನಗಳನ್ನು ಅನುಸರಿಸಬೇಕು ಎನ್ನತಕ್ಕಂತಹ ಒಂದು ವ್ಯವಸ್ಥೆ. ಮತ್ತು ಹಿಂದೆ ನೀರನ್ನು ಪ್ರದರ್ಶನಕಾರರ ಮೇಲೆ ಬಿಡತಕ್ಕಂಥಾದ್ದು ಒಂದು, ಮತ್ತು ರಬ್ಬರ್

ಗುಂಡುಗಳನ್ನು ಉಪಯೋಗಿಸುತ್ತಾರೆ ಎಂದು ಹೇಳಿ ಸರ್ಕಾರದ ಪ್ರಯತ್ನವಾಯಿತು. ಕರ್ನಾಟಕ ಸರ್ಕಾರದಲ್ಲಿ ಆ ಪ್ರಯೋಗ ಮಾಡಿದರು. ಮೊದಲು ಜನಗಳ ಮೇಲೆ ನೀರನ್ನು ಬಿಟ್ಟು ಅದನ್ನು ಮಾಡಿದರೇ, ನೀವು ಲಾಠಿ ಚಾರ್ಜ್ ಮೊದಲು ಮಾಡಿದ್ದಿರಿ, ಏನಾದರೂ ಮಾಡಬೇಕಲ್ಲಾ ಒಂದು ಮೆರವಣಿಗೆ, ಒಂದು ಗದ್ದಲ ಆಗುವುದನ್ನು ನಿಲ್ಲಿಸಬೇಕಾದರೆ ಆ ವಿಧಾನಗಳು ಇದೆಲ್ಲಕ್ಕಿಂತ.....

(ಗೊಂದಲ)

ನೀವು ಕೊಡುವುದು ಅಲ್ಲ, ಅವರು ಕೊಡುವುದು ನೀವು ನಮಗೆ ಕೃಪೆವೇನೂ ಅಲ್ಲ. ನಿಮ್ಮ ಕೃಪೆಯಿಂದ ಏನು ಆಗುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನನಗನ್ನಿಸುತ್ತದೆ, ವಿರೋಧ ಪಕ್ಷಗಳು ಎಲ್ಲಾ ಸೇರಿ ಒಂದು ಶಾಂತ ವಾತಾವರಣ ನಿರ್ಮಾಣ ಮಾಡುವುದಕ್ಕೆ ಪ್ರಯತ್ನಪಟ್ಟಿರಿ. ನಾನು ಬಹಳ ಸಂತೋಷ ಪಡುತ್ತೇನೆ. ನಿಮ್ಮ ಸರ್ಕಾರದ ಬಗ್ಗೆ ನಾನು ಅವತ್ತೆ ಅಭಿನಂದನೆ ಸಲ್ಲಿಸಿದೆ. ಪ್ರಾಮಾಣಿಕವಾಗಿ ಮಾಡಿದ್ದೇನೆ, ನನ್ನದು ಸಂಶಯವಿಲ್ಲ. ಇಷ್ಟು ನಡೆದ ಮೇಲೆ ಪರಿಸ್ಥಿತಿ ಮುಂದೆ ಆಗದೆ ಇರುವ ರೀತಿಯಲ್ಲಿ ನೀವು ಮುಂಜಾಗ್ರತಾ ಕ್ರಮ ವಹಿಸಿಕೊಳ್ಳದೆ ಇರುವುದಕೆಡಕ ಕಾರಣ ಏನು ? ಈ ಮುಂಜಾಗ್ರತೆಗೆ ವಿಫಲವಾದಂತಹ ಅಧಿಕಾರಿಗಳು ಯಾರು ? ಈ ಮಧ್ಯೆ ಅಧಿಕಾರಿಗಳು ಮತ್ತು ಜನರ ಮಧ್ಯೆ ನಡೆದಿರತಕ್ಕಂತಹ ವಿಚಾರ ಏನು ? ಕೊನೆಯದಾಗಿ ಶಾಶ್ವತವಾಗಿ ಹುಬ್ಬಳ್ಳಿಯಲ್ಲಿ ಶಾಂತಿ ನೆಲೆಸುವುದಕ್ಕೆ ನಿಮ್ಮಲ್ಲಿ ಏನು ಸೂತ್ರ ಇದೆ ಎಂಬುದನ್ನು ತಾವು ಪರಿಣಾಮಕಾರಿಯಾಗಿ ಹೇಳಬೇಕು. ನ್ಯಾಯಾಂಗ ತನಿಖೆಯನ್ನು ಮಾಡುತ್ತೇವೆಂದು ಹೇಳಿದಿರಿ, ಆದರೆ ತಪ್ಪಿತಸ್ಥರು ಯಾರು ಅದರಲ್ಲಿ ಅಧಿಕಾರಿಗಳು ಯಾರು ಎನ್ನುವುದನ್ನು ನೀವು ನೇರವಾಗಿ ಈ ಸಭೆಯ ಮುಂದೆ ಹೇಳಬೇಕು ಎಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಇಂದಿನ ಪರಿಸ್ಥಿತಗೆ ಕಾರಣ ಯಾರು ಎಂಬುದನ್ನು ಈಗ ನಾನು ವಿಶ್ಲೇಷಣೆ ಮಾಡುವುದು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿರುವುದರಿಂದ ಅಷ್ಟೊಂದು ಸೂಕ್ತವಾಗುವುದಿಲ್ಲ. ಪರಿಸ್ಥಿತಿಗೆ ಕಾರಣ ಯಾರು ಮತ್ತು ಪೋಲೀಸರು ಮುನ್ನೆಚ್ಚರಿಕೆ ವಹಿಸಿದ್ದಾರೋ, ಸಾಕಷ್ಟು ಬಂದೋಬಸ್ತ್ ಮಾಡಿದ್ದಾರೋ ಇಲ್ಲವೋ ಇದೆಲ್ಲಾವೂ ಸಹಿತ ನ್ಯಾಯಾಂಗ ತನಿಖೆಯಲ್ಲಿ ಬರುತ್ತದೆ. ಟರ್ಮ್ಸ್ ಆಫ್ ರೆಫರೆನ್ಸ್ ಇದೆ, ನಾನು ಒಪ್ಪುತ್ತೇನೆ. ಶಾಶ್ವತ ಶಾಂತಿಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರತಕ್ಕಂತಹ ಸಲಹೆಯನ್ನು ಸಂಪೂರ್ಣವಾಗಿ ಸರ್ಕಾರ ಸ್ವೀಕಾರ ಮಾಡುತ್ತದೆ. ಇಂತಹ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನ್ಯಾಷನಲ್ ಇಂಟಿಗ್ರೇಷನ್ ಕಮಿಟಿ ಇದೆ. ಈ ನ್ಯಾಷನಲ್ ಇಂಟ್ರಿಗೇಷನ್ ಕಮಿಟಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ರೀಕಾನ್‌ಸ್ಟಿಟ್ಯೂಟ್ ಮಾಡುವವರು ಇದ್ದಾರೆ. ಪ್ರತಿ ತಿಂಗಳು ಇದು ಸಭೆ ಸೇರಿ ಇಂತಹ ಜಿಲ್ಲಾವಾರು ಎಲ್ಲೆಲ್ಲಿ ಸೂಕ್ಷ್ಮವಾದ ಪ್ರದೇಶಗಳಿವೆ ಅವುಗಳನ್ನು ಗುರುತಿಸಿ ಎಲ್ಲಾ ರಾಜಕೀಯ ಪಕ್ಷಗಳು, ಇತರೆ ಸಂಘ ಸಂಸ್ಥೆಗಳು ಅವರೆಲ್ಲರ ಸಹಕಾರ ಪಡೆದು ರಾಜ್ಯದಲ್ಲಿ ಶಾಂತಿಯನ್ನು ನೆಲೆಸುವುದಕ್ಕೆ ನಾವು ನೀವು

ಎಲ್ಲಾ ಪ್ರಯತ್ನ ಮಾಡೋಣ.

ಶ್ರೀ ಜಿ.ವಿ.ರಾಮರೆಡ್ಡಿ:- ಮಾನ್ಯ ಉಪಾಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ನಾಲ್ಕು ದಿವಸಗಳಿಂದ ಗಲಭೆ ನಡೆಯುತ್ತಾ ಇರತಕ್ಕಂತಹ ಹಿನ್ನಲೆಯಲ್ಲಿ ಸ್ವಲ್ಪ ಗಂಭೀರವಾಗಿ ಈ ಸದನ ಗಮನಿಸಬೇಕಾಗಿದೆ ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ಕಾರಣ ಏನೆಂದರೆ ಇಲ್ಲಿ ಒಂದು ಅಂಶ ಸ್ಪಷ್ಟವಾಗಿದೆ, 30 ವರ್ಷಗಳಿಂದ ಆ ಓಣಿಯಲ್ಲಿ ಯಾರೂ ಕೂಡ ಮೆರವಣಿಗೆ ತೆಗೆದುಕೊಂಡು ಹೋಗದೆ ಇರತಕ್ಕಂತಹ ಜಾಗಕ್ಕೆ ಮೆರವಣಿಗೆ ಹೋಗಿರುವುದು ಒಂದು ಮುಖ್ಯ ಘಟನೆ. ಇಡೀ ಘಟನೆಗೆ ಮೂಲ ಕಾರಣ. ಆ ಮೂಲ ಕಾರಣಕ್ಕೆ ಕಾರಣಕರ್ತರು ಯಾರು ?

ಉಪಾಧ್ಯಕ್ಷರು :- ನ್ಯಾಯಾಂಗ ತನಿಖೆಯಲ್ಲಿ ಎಲ್ಲಾ ಬರುತ್ತದೆ.

ಶ್ರೀ ಜಿ.ವಿ.ರಾಮರೆಡ್ಡಿ :- ಎಲ್ಲಾ ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದಿರೆಂದರೆ ಎಲ್ಲಾ ಅದರಲ್ಲಿ ಬರುತ್ತದೆ ಎಂದರೆ ಇಲ್ಲಿ ಯಾರೂ ಮಾತನಾಡುವ ಅವಶ್ಯಕತೆ ಇಲ್ಲ. ನನ್ನ ಸಲಹೆ ಏನಿದೆ, ನಾವೆಲ್ಲರೂ ಸಲಹೆ ಮಾಡುವುದು ಎಲ್ಲರೂ ಶಾಂತಿಯುತವಾಗಿ ಇರಬೇಕು. ಇದನ್ನು ಉದ್ದೇಶಪೂರ್ವಕವಾಗಿ ಪ್ರಚೋದನೆ ಮಾಡಿದಂತಹ ಮತ್ತು ಅದಕ್ಕೆ ಪ್ರೇರಣೆ ನೀಡಿರತಕ್ಕಂತಹ ಶಕ್ತಿಗಳು ಯಾರು ಎನ್ನತಕ್ಕಂತಹದ್ದು ಸ್ಪಷ್ಟವಾಗಬೇಕು. ಅದಕ್ಕೆ ಶಕ್ತಿಗಳು ಯಾರು ಎಂದು ಹೇಳಿದರೆ ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ, ಹುಬ್ಬಳ್ಳಿಯಲ್ಲಿ ಧ್ವಜಾರೋಹಣ ಮಾಡಿದ್ದನ್ನು ಸಹಿಸದೆ ಇರತಕ್ಕಂತಹ ಜನ ಈ ಘಟನೆಗೆ ಪ್ರೇರಣಾ ಶಕ್ತಿಯಾಗಿದ್ದಾರೆ. ಅವರನ್ನು ಮೊದಲು ಗುರುತಿಸಬೇಕು. ಒಬ್ಬರು ಇರಿತದಿಂದ ಸತ್ತಿದ್ದಾರೆ, ಇನ್ನೊಬ್ಬರು ಗೋಲಿಬಾರ್‌ನಿಂದ ಸತ್ತಿದ್ದಾರೆ. ಇರಿತದಿಂದ ಸತ್ತ ಮೇಲೆ ಗೋಲಿಬಾರ್ ಆಗಿದೆ ಎನ್ನುವುದು ಬಹಳ ಮುಖ್ಯವಾದ ಘಟನೆ. ಅಲ್ಲಿ ಇರಿತಕ್ಕೆ ಒಳಗಾದಂತಹ ಮನುಷ್ಯ ಯಾರು, ಆ ಮಸೀದಿಯಿಂದ ಓಡಿ ಬಂದಂತಹ ಒಬ್ಬ ವ್ಯಕ್ತಿ ಎಂದು ಹೇಳತಕ್ಕಂಥ ರೀತಿಯಲ್ಲಿ ಅರ್ಥ ಬರುತ್ತದೆ. ಆ ರೀತಿ ಏನೂ ನೇರವಾಗಿ ಬರೆದಿಲ್ಲ. ಇದಾದ ಮೇಲೆ ಪೋಲೀಸ್‌ನವರು ಗೋಲಿಬಾರ್ ನಡೆಸಿದ್ದಾರೆ. ಪೋಲೀಸರ ಗೋಲಿಬಾರ್ ಬಗ್ಗೆ ನಾನು ಸಮರ್ಥನೆ ಮಾಡುತ್ತಾ ಇಲ್ಲ. ಪೋಲೀಸ್‌ನವರಿಗೆ ಅದು ವೃತ್ತಿ ಆಗಬಿಟ್ಟಿದೆ. ಅವರಿಗೆ ನೀತಿ ನಿಯಮಗಳು ಏನೂ ಇಲ್ಲ. ಎಲ್ಲೆಂದರಲ್ಲಿ ಗೋಲಿಬಾರ್ ಮಾಡುತ್ತಾರೆ, ಎಲ್ಲೆಂದರಲ್ಲಿ ಲಾಠಿ ಚಾರ್ಜ್ ಮಾಡುತ್ತಾರೆ, ಅವರದೇ ಆದಂತಹ ನಿಯಮಗಳು ಅವರಿಗೆ ಇದೆ. ಅದರ ಬಗ್ಗೆ ದೀರ್ಘವಾಗಿ ಚರ್ಚೆ ಬೇಡ. ಇಲ್ಲಿ ಪ್ರಶ್ನೆ ಇರತಕ್ಕಂಥಾದ್ದು, ಯಾರಾದರೂ ಆಗಿರಬಹುದು, ನಾನು ಪಕ್ಷವನ್ನು ಹೇಳುತ್ತಿಲ್ಲ. ಅವರು ಒಂದು ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ ಜನ. ಅಲ್ಲಿರತಕ್ಕಂಥ ಪರಿಸ್ಥಿತಿ ಹಿನ್ನಲೆಯಲ್ಲಿ......

ಶ್ರೀ ಎಂ.ಶ್ರೀನಿವಾಸ್:- ಮಾನ್ಯ ಉಪಾಧ್ಯಕ್ಷರೇ, ಇವರು ಏನೇನೋ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಶ್ರೀ ಜಿ.ವಿ.ರಾಮರೆಡ್ಡಿ:- ನಾನು ಏನೇನೋ ಮಾತನಾಡುತ್ತಾ ಇಲ್ಲ, ಅಲ್ಲಿ ಇರಿತಕ್ಕೆ

ಬಳಗಾಗಿರತಕ್ಕಂಥಾದ್ದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ.

ಶ್ರೀ ಎಂ.ಶ್ರೀನಿವಾಸ್ :- ಮಾನ್ಯ ಉಪಾಧ್ಯಕ್ಷರೇ, ನೀವು ಈ ರೀತಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಈ ಸದನದಲ್ಲಿ ಅವರು ಪ್ರಚೋದನೆ ಮಾಡುತ್ತಿದ್ದಾರೆ.

ಶ್ರೀ ಜಿ.ವಿ.ರಾಮರೆಡ್ಡಿ:- ನಾನು ಏನು ಮಾತನಾಡುತ್ತಾ ಇಲ್ಲ.

(ಗೊಂದಲ)

ಉಪಾಧ್ಯಕ್ಷರು :- ನೀವು ಈ ವಿಷಯಕ್ಕೆ ಸಂಬಂಧಪಟ್ಟಂತೆ ಆಪಾದನೆ ಮಾಡುವುದು ಬೇಡ. ನೇರವಾಗಿ ನಿಮ್ಮ ಸಲಹೆಗಳು ಏನು ಇವೆ ಅವನ್ನು ಹೇಳಿ

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೇ, ಅವರು ಏನು ಹೇಳಿದರು ಅದನ್ನು ತಾವು ತೆಗೆಸಿ ನೋಡಿ.

ಉಪಾಧ್ಯಕ್ಷರು :- ಆಯಿತು, ತೆಗೆಸಿ ನೋಡಿಸುತ್ತೇನೆ.

(ಗೊಂದಲ)

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ:- ನೀವು ಮಾಡುತ್ತಿದ್ದೀರಿ, ಎಲ್ಲಾ ಜನಗಳಿಗೆ ಪ್ರಚೋದನೆ ನೀವು ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಿ.ವಿ.ರಾಮರೆಡ್ಡಿ:- ಇದು ನನ್ನ ಅಭಿಪ್ರಾಯ.

ಉಪಾಧ್ಯಕ್ಷರು :- ಅದು ನಿಮ್ಮ ಅಭಿಪ್ರಾಯ ಇರಬಹುದು. ಆದರೆ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ:- ಹಾಗಾದರೆ ನ್ಯಾಯಾಂಗ ತನಿಖೆ ಏಕೆ, ಹಾಗಾದರೆ ನೀವೇ ಕಾಂಪ್ಲೆನೆಂಟ್ ಆಗಿ.

ಶ್ರೀ ಜಿ.ವಿ.ರಾಮರೆಡ್ಡಿ:- ನನ್ನ ಅಭಿಪ್ರಾಯ, ನ್ಯಾಯಾಂಗ ತನಿಖೆ ಇದೆ ಎಂದು

ಹೇಳಿ ಬಾಯಿ ಮುಚ್ಚಿಸುವುದಕ್ಕೆ ಆಗುವುದಿಲ್ಲ ನೀವು.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ :- ಆಯಿತು, ನೀವೇ ಮಾಡಿ ಹಾಗಾದರೆ...

(ಗೊಂದಲ)

ಶ್ರೀ ಜಿ.ವಿ.ರಾಮರೆಡ್ಡಿ:- ನ್ಯಾಯಾಂಗ ತನಿಖೆ ಇದೆ ಎಂದು ಹೇಳಿ ಬಾಯಿ ಮುಚ್ಚಿಸುವುದಕ್ಕೆ ಆಗುವುದಿಲ್ಲ ನೀವು. ನನ್ನ ಅಭಿಪ್ರಾಯ ಹೇಳುತ್ತಿದ್ದೇನೆ, ನೀವು ಒಪ್ಪಬಹುದು, ಬಿಟ್ಟರೂ ಬಿಡಬಹುದು. ಇವತ್ತು ಯಾರು ಅಲ್ಲಿ ಧರಣಿ ಕುಳಿತಿದ್ದಾರೆ, ಅಲ್ಲಿರತಕ್ಕಂಥ ಪರಿಸ್ಥಿತಿ ಏನು ? ನೀವು ಏಕೆ ಧರಣಿ ಕುಳಿತಿರಿ ಹಾಗಾದರೆ ? ಅಲ್ಲಿರತಕ್ಕಂಥ ಪರಿಸ್ಥಿತಿ ಬಗ್ಗೆ ನಿಮಗೆ ಪ್ರಾಮಾಣಿಕವಾದಂತಹ ಕಾಳಜಿ ಇದ್ದಿದ್ದರೆ ಧರಣಿ ಕೂಡತಕ್ಕಂಥ ಅವಶ್ಯಕತೆ ಇರಲಿಲ್ಲ. ಅದನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಎಂ.ಶ್ರೀನಿವಾಸ್:- ಅವರಿಗೆ ಏನು ಮಾಡಿ ಆಗಿದೆ ಅಂದರೆ ಹೋಗುವುದು, ಮೂರು ಮೂರು ಜನ, ಕಂಪನಿಗಳಿಗೆಲ್ಲಾ ಬಾಗಿಲು ಹಾಕಿಸುವುದು.

(ಗೊಂದಲ)

ಉಪಾಧ್ಯಕ್ಷರು :- ಒಬ್ಬರ ಮೇಲೆ ಒಬ್ಬರು ಅಪವಾದ ಮಾಡುವುದು ಬೇಡ.

(ಗೊಂದಲ)

ಉಪಾಧ್ಯಕ್ಷರು :- ರೆಡ್ಡಿಯವರೇ, ಕುಳಿತುಕೊಳ್ಳಿ ಸಾಕು....

(ಗೊಂದಲ)

ಶ್ರೀ ಎಂ.ಶ್ರೀನಿವಾಸ್ :- ಹುಬ್ಬಳ್ಳಿಯಲ್ಲಿ ಗಲಾಟೆ ಆಗಬೇಕಾದರೆ ನೀವೇ ಕಾರಣ ಎಂದು ಹೇಗೆ ಹೇಳುತ್ತಿದ್ದೀರಿ.

ಶ್ರೀ ಜಿ.ವಿ.ರಾಮರೆಡ್ಡಿ:- ಹೌದು ನಾನೇ ಹೇಳುತ್ತಿದ್ದೇನೆ, ಬೇರೆ ಯಾರು ಅಲ್ಲ ಕಾರಣ, ನೀವೇ ಕಾರಣ ಅದಕ್ಕೆ ಎಂದು ಹೇಳುತ್ತಿದ್ದೇನೆ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ:- ನೀವೆ ಕಾರಣಕರ್ತರು..

ಒಬ್ಬ ಮಾನ್ಯ ಸದಸ್ಯರು :- ಸರ್ಕಾರದ ಪರವಾಗಿ ಏಕೆ ವಕಾಲತ್ತು ಮಾಡುತ್ತಿದ್ದೀರಿ ?

ಶ್ರೀ ಜಿ.ವಿ.ರಾಮರೆಡ್ಡಿ:- ನಾನು ಸರ್ಕಾರದ ಪರವಾಗಿ ವಕಾಲತ್ತು ಮಾಡುತ್ತಿಲ್ಲ. ನೇರವಾಗಿ ನನ್ನ ಅನಿಸಿಕೆ ಏನಿದೆ ಅದನ್ನು ಮಾತ್ರ ಹೇಳಿದರೆ ಸಾಕಾಗಿದೆ. ಅವರು

ಇವರು ಹೇಳುವುದು ಬೇಕಾಗಿಲ್ಲ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:- ನಾನು ಅವರು ಮಾತನಾಡುವುದು ಬೇಡ ಎಂದು ಹೇಳುತ್ತಿಲ್ಲ. ನಾವು ನೇರವಾಗಿ ಆಪಾದನೆ ಮಾಡುವುದು ಬೇಡ ಎಂದು ಹೇಳುತ್ತಿರುವುದು. ಅವರು ಏನು ಬೇಕಾದರೂ ಮಾತನಾಡಲಿ. ಇಬ್ಬರು ಶಾಸಕರು ಸತ್ಯಾಗ್ರಹ ಕುಳಿತಿದ್ದರೆ ಅವರಿಗೋಸ್ಕರ ಇದು ಆಗುತ್ತದೆ ಎಂದು ಹೇಳಿದರೆ ಅದು ಸರಿಯೆ ?

(ಗೊಂದಲ)

ಉಪಾಧ್ಯಕ್ಷರು :- ನಾನು ಹೇಳಿದ್ದೇನೆ, ನಾನು ಮೊದಲೇ ಹೇಳಿದ್ದೇನೆ ರೆಕಾರ್ಡ್ ತೆಗಿರಿ ನೋಡುತ್ತೇನೆ, ಅದು ಇದ್ದರೆ ತೆಗಿದು ಹಾಕುತ್ತೇನೆ.

(ಗೊಂದಲ)

ಶ್ರೀ ಜಿ.ವಿ.ರಾಮರೆಡ್ಡಿ:- ನಾನು ಪ್ರಚೋದನೆ ಮಾಡುತ್ತಾ ಇಲ್ಲ, ನೀವು ಹೇಳಿದ್ದನೆಲ್ಲಾ ಒಪ್ಪಬೇಕೆ ಎಂದು ಏನೂ ಇಲ್ಲ. ನನ್ನ ಅಭಿಪ್ರಾಯದ ಪ್ರಕಾರ 20 ವರ್ಷಗಳಿಂದ ಆ ಓಣಿಯಲ್ಲಿ ಮೆರವಣಿಗೆ ಹೋಗಲಿಲ್ಲ. ಅದಕ್ಕೆ ಅನುಮತಿ ಕೊಟ್ಟಂತಹ ಅಧಿಕಾರಿಗಳದು ತಪ್ಪಿದೆ. 20 ವರ್ಷಗಳಿಂದ ಆ ಓಣಿಯಲ್ಲಿ ಮೆರವಣಿಗೆ ಹೋಗದೆ ಇರತಕ್ಕಂಥಾವರು ಈ ಸಲ ಮೆರವಣಿಗೆ ಹೋಗುವುದಕ್ಕೆ ಪ್ರಚೋದನೆ ನೀಡಿರತಕ್ಕಂಥಾದ್ದು ತಪ್ಪಿದೆ. ಮತ್ತೆ ಇವತ್ತು ಅಲ್ಲಿ ಅಷ್ಟು ಗಂಭೀರ ಪರಿಸ್ಥಿತಿ ಇದ್ದರೂ ಸಹ ಕೂಡ ಅದನ್ನು ತಿಳಿ ಮಾಡುವುದರ ಬದಲು, ಆ ಸಮಸ್ಯೆ ಪರಿಹಾರ ಮಾಡುವ ಬದಲು, ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ ಒಬ್ಬ ಶಾಸಕ ಧರಣಿ ಕುಳಿತರೆ ಅದು ಪ್ರಚೋದನೆ ನೀಡಿದಂತೆ ಆಗುತ್ತದೋ, ಶಮನ ಮಾಡಿದಂತೆ ಆಗುತ್ತದೆಯೋ ಎಂಬುದನ್ನು ದಯವಿಟ್ಟು ಈ ಸದನ ಆಲೋಚನೆ ಮಾಡಬೇಕಾಗುತ್ತದೆ. ಇದು ಈಗಿರತಕ್ಕಂಥ ಪರಿಸ್ಥಿತಿ. ಆದುದರಿಂದ ಈ ಘಟನೆಗೆ ಪ್ರೇರಕ ಶಕ್ತಿಗಳು ಯಾರಿದ್ದಾರೆ ಅವರನ್ನು ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳಬೇಕು ಎಂಬುದು ನಮ್ಮ ಅಭಿಪ್ರಾಯ.

ಶ್ರೀ ಎಂ.ಶ್ರೀನಿವಾಸ್:- ಇವರು ಧರಣಿ ಕುಳಿತುಕೊಳ್ಳುತ್ತೀರಲ್ಲಾ, ಆಗ ಏನು ಇದರ ಅರ್ಥ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:- ಇವರೂ ಧರಣಿ ಕುಳಿತುಕೊಳುಳತ್ತಾರೆ. ಮಾತೆತ್ತಿದ್ದರೆ ಇವರು ಧರಣಿ ಕುಳಿತುಕೊಳ್ಳುತ್ತಾರೆ. 4 ಕಾರ್ಮಿಕರಿದ್ದರೆ ಸಾಕು, ಅದನ್ನೆಲ್ಲಾ ಬಾಗಿಲು ಹಾಕಿಸುವುದು. ಆಗ ಧರಣಿ ಕುಳಿತುಕೊಳ್ಳುತ್ತೀರಿ. ಆಗ ಏನು ಅದರ ಅರ್ಥ. ಮಾಲೀಕರ ಹತ್ತಿರ ಅಡ್ಜಸ್ಟ್ ಮಾಡಿಕೊಳ್ಳುವುದಕ್ಕೆ ಇವರು ಆ ರೀತಿ ಮಾಡುವುದು.

ಶ್ರೀ ಜಿ.ವಿ.ರಾಮರೆಡ್ಡಿ:- ಹೌದು, ಅದು ಜನರ ಸಮಸ್ಯೆ, ಮೆರವಣಿಗೆ ಹೋಗುವುದು ಜನರ ಸಮಸ್ಯೆ ಅಲ್ಲ.

(ಗೊಂದಲ)

ಉಪಾಧ್ಯಕ್ಷರು :- ನಿಮ್ಮ ನಿಮ್ಮ ಮೇಲೆ ನೇರವಾಗಿ ಮಾತನಾಡತಕ್ಕಂಥಾದ್ದು ಅಲ್ಲ. ಇಲ್ಲಿ ಚೇರ್‌ಗೆ ಅಡ್ರೆಸ್ ಮಾಡಿ ಮಾತನಾಡತಕ್ಕದ್ದು. ಇನ್ನು ಕುಳಿತುಕೊಳ್ಳಿರಿ. ನೀವು ಹೇಳಿದ್ದು ಎಲ್ಲಾ ಸಾಕು. ಇನ್ನು ಹೇಳತಕ್ಕಂಥ ಅವಶ್ಯಕತೆ ಇಲ್ಲ. ಗೃಹ ಸಚಿವರು ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೇ, ನಾನು ಸಿಪಿ ಹಾಕಿದ್ದೇನೆ, ಹಾಗೂ ಅಧ್ಯಕ್ಷರ ಹತ್ತಿರ ಮಾತನಾಡಿದ್ದೇನೆ. ಇದು ಅತ್ಯಂತ ಪ್ರಮುಖವಾದಂತಹ ವಿಷಯ. ನಾನು ತಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಈ ಸದನದ ಸದಸ್ಯರಿಗೆ ನಮ್ಮ ಸ್ಥಾನ ಮಾನಕ್ಕೆ ಒಂದಿಷ್ಟು ಗೌರವವನ್ನು ತಾವು ಏನಾದರೂ ತಮ್ಮ ಖುರ್ಚಿಯಿಂದ ಸಿಗುತ್ತದೋ ಇಲ್ಲವೋ ಕೇಳುತ್ತಿದ್ದೇನೆ. ಚುನಾಯಿತ ಪ್ರತಿನಿಧಿಯಾಗಿ ಅಲ್ಲಿರುವಂತಹ ಇಬ್ಬರು ಶಾಸಕರು ಸದನದ ಕಾರ್ಯಕಲಾಪವನ್ನು ಬಿಟ್ಟು ಗೃಹ ಮಂತ್ರಿಗಳು ಹುಬ್ಬಳ್ಳಿಗೆ ಹೋದಾಗ ಅವರನ್ನು ಭೇಟಿಯಾಗಿ, ಅಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಆಗಿಲ್ಲ, ಅಲ್ಲಿ ಪೋಲೀಸ್ ಬಂದೋಬಸ್ತ್ ನಮ್ಮ ನಿರೀಕ್ಷೆಯಂತೆ ಆಗಲಿಲ್ಲ, ದಿನನಿತ್ಯ ಈ ರೀತಿಯ ಘಟನೆಗಳು ಮರುಕಳಿಸುತ್ತಿವೆ. ಅದನ್ನು ಬಂದೋಬಸ್ತ್ ಮಾಡಬೇಕು. ಪೋಲೀಸ್ ಬಂದೋಬಸ್ತ್ ಸರಿಯಾಗಿ ಆಗಬೇಕು, ಸರಿಯಾದಂತಹ ತನಿಖೆಯಾಗಬೇಕು. ಯಾವ ಪೋಲೀಸ್ ಅಧಿಕಾರಿ ಅವತ್ತಿನಿಂದ ಇವತ್ತಿನವರೆಗೂ ಈ ರೀತಿಯ ಚಿತಾವಣೆ ಮಾಡಿಕೊಂಡು ಆ ಹುಬ್ಬಳ್ಳಿಯಲ್ಲಿ ಬೆಂಕಿ ಹತ್ತಿಸುವುದಕ್ಕೆ ಕಾರಣನಾಗಿದ್ದಾನೋ ಅವರ ಸಸ್ಪೆಂಡ್ ಮಾಡಿ ಎನ್‌ಕೊಯರಿ ಮಾಡಬೇಕೆಂದು, ಈ ಡಿಮ್ಯಾಂಡ್‌ಗಳನ್ನು ಇಟ್ಟುಕೊಂಡು ಅಲ್ಲಿ ಧರಣಿ ಕುಳಿತಿದ್ದರೆ, ಅವರು ತಮ್ಮ ಕರ್ತವ್ಯ ಮಾಡುತ್ತಿದ್ದರೆ, ಇಲ್ಲಿ ಸದನದ ಒಬ್ಬ ಸದಸ್ಯನ ಬಗ್ಗೆ ಏನು ಬೇಕಾದರೂ ಮಾತನಾಡಬಹುದೇ? ಸನ್ಮಾನ್ಯ ನಾಯಕರನ್ನು ನಾನು ಒಂದು ಮಾತು ಕೇಳುತ್ತೇನೆ, ನಾಯಕರು ಇಲ್ಲಿ ಕೂತಿದ್ದಾರೆ, ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಿಜ, ಅವರು ಹೇಳಿದ ಮಾತು. ಒಂದು ಭಾಗ ಸರಿ, ಏನು ಅಲ್ಲಿ ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜ ಶಾಂತ ರೀತಿಯಿಂದ ಹಾರಿತು, ಅಲ್ಲಿ ಯಾರು ರಾಷ್ಟ್ರಧ್ವಜ ಹಾರಬಾರದು ಎಂದು ಜಾತಿಯ ವಿಷ ಬೀಜವನ್ನು ಬಿತ್ತಿ ಅದು ಆಗದ ಹಾಗೆ ನೋಡಿಕೊಂಡು ಅದರ ಬೇಳೆ ಬೇಯಿಸಿಕೊಳ್ಳಬೇಕು ಎಂದು ರಾಜಕಾರಣ ಮಾಡಿರುವಂತಹ ಕುತಂತ್ರಿಗಳು

ಯಾರಿದ್ದರು ಅವರು ಇದಕ್ಕೆ ಮೂಲ ಕಾರಣ ಎಂದು ಅಷ್ಟೇ ಹೇಳಿದರೆ ಅದಕ್ಕೆ ನಾನು ಒಪ್ಪುತ್ತೇನೆ. ಇವತ್ತು ಹೊಸ ಸರ್ಕಾರ ಬಂದ ಮೇಲೆ ಅಲ್ಲಿ ರಾಷ್ಟ್ರ ಧ್ವಜ ಗೌರವಯುತವಾಗಿ ಹಾರಬೇಕು ಎಂದು ಹೇಳುವುದಕ್ಕೋಸ್ಕರ ಎಲ್ಲಾ ರೀತಿಯ ಸಹಕಾರವನ್ನು ಎಲ್ಲರೂ ಕೊಟ್ಟರು. ಆದರೆ ಇವತ್ತು ವಾಸ್ತವಿಕ ಸ್ಥಿತಿಯನ್ನು ಒಬ್ಬ ಶಾಸಕನಾಗಿ ತಿಳಿದುಕೊಳ್ಳದೆ ಈ ಸದನದ ಒಬ್ಬ ಸದಸ್ಯನಾಗಿ, ಇನ್ನೊಬ್ಬ ಸದನದ ಸದಸ್ಯ ತನ್ನ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಹೋಗಬೇಕಾದರೆ, ಈ ರೀತಿಯ ಮಾತನಾಡುವುದು ಸರಿಯೇ? ನಾನು ಅವರನ್ನೇ ಕೇಳುತ್ತೇನೆ, ಅವರ ಕ್ಷೇತ್ರದಲ್ಲಿ...

ಉಪಾಧ್ಯಕ್ಷರು:- ರೆಡ್ಡಿಯವರೇ, ತಾವು ಕುಳಿತುಕೊಳ್ಳಿ, ಅವರು ಮಾತನಾಡುತ್ತಿರಬೇಕಾದರೆ....

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಯೀಲ್ಡ್ ಆಗಿಲ್ಲ, ಈಗ ಅವರು ಸದಸ್ಯರು ಇದ್ದಾರೆ, ಅವರು ಕ್ಷೇತ್ರದಲ್ಲಿ ಏನೋ ಅನಾಹುತವಾಗುತ್ತದೆ, ಅವರು ಅಲ್ಲಿ ಹೋಗಿ ಸರ್ಕಾರ ಸರಿಯಾದ ಬಿಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಧರಣಿ ಕುಳಿತುಕೊಳ್ಳುತ್ತಾರೆ, ಅದಕ್ಕೆ ಅವರೇ ಪ್ರೇರಣೆ ಕೊಡುತ್ತಾರೆ ಎಂದು ನಾನು ಹೇಳುವುದಕ್ಕೆ ಬರುತ್ತದೆಯೇ ಅಧ್ಯಕ್ಷರೇ ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸೂಕ್ಷ್ಮವಾದಂತಹ ವಿಷಯಗಳಿಗೆ ತುಂಬಾ ಎಚ್ಚರಿಕೆಯಿಂದ ಪ್ರಸ್ತಾಪ ಮಾಡಿ ಅಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೋಸ್ಕರ ಏನು ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ನಾನು ಸಲಹೆಯನ್ನು ಕೊಡಬೇಕಾಗಿದೆ. ಮಾನ್ಯ ಗೃಹ ಸಚಿವರು ಈಗತಾನೇ ಮಾತನಾಡುತ್ತಿದ್ದರು, ನಾನು ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ದೂರವಾಣಿ ಮೂಲಕ ಮಾತನಾಡಿದೆ. ಗೃಹ ಸಚಿವರ ಹತ್ತಿರ ಕೂಡ ಮಾತನಾಡಿದೆ, ಅವರು ಅಲ್ಲಿಗೆ ವಿಶೇಶವಾಗಿ ಹೆಲಿಕಾಪ್ಟರನ್ನು ವ್ಯವಸ್ಥೆ ಮಾಡುತ್ತೇನೆ ನೀವು ಬೇಕಾದರೆ ಹೋಗಿ ನೋಡಿಕೊಂಡು ಬನ್ನಿರಿ ಎಂದು ಹೇಳಿದರು. ಅಲ್ಲಿ ನಾನು ಹೋಗುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ, ತಾವು ಹೋಗಿ ಬಂದಿದ್ದೀರಿ, ಅಲ್ಲಿ ಏನಾಗಿದೆ ವರದಿಯನ್ನು ದಯಮಾಡಿ ಕೊಡಿ, ನಮ್ಮ ಶಾಸಕರು ನಿನ್ನೆಯಿಂದ ಗೊಂದಲದಲ್ಲಿದ್ದಾರೆ, ಅಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದಕ್ಕೆ ನಿಮ್ಮ ಪೋಲೀಸ್ ಅಧಿಕಾರಿಗಳು ಸಹಕಾರ ಕೊಡುತ್ತಿಲ್ಲ. ನಿಮ್ಮ ಪೋಲೀಸ್ ಸಿಬ್ಬಂದಿ ಬಂದಿದ್ದರೂ ಸಹ ಉದ್ದೇಶಪೂರ್ವಕವಾಗಿ ಅವರು ಎಲ್ಲಿರಬೇಕೋ ಅಲ್ಲಿ ಕಾವಲು ಕಾಯದೇ ದೂರ ನಿಂತುಕೊಂಡು ಎಲ್ಲವನ್ನೂ ನೋಡಿಕೊಂಡು ಕೈಕಟ್ಟಿ ಕುಳಿತಿರುವಂತಹ ವಾತಾವರಣ ಕಂಡುಬರುತ್ತಿದೆ. ಸನ್ಮಾನ್ಯ ಗೃಹ ಸಚಿವರು ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಲ್ಲ, ಪಾನ್ ಬಜಾರ್‌ನಲ್ಲಿ ನೇಮಿಚಂದ್ ಅಂಡ್ ಕಂಪನಿಯ ಎಲೆಕ್ಟ್ರಿಷಿಯನ್ ಅಂಗಡಿಗೆ ಬೆಂಕಿ ಬಿತ್ತು. ಅದರಿಂದ 40 ರಿಂದ 50 ಲಕ್ಷ ರೂಪಾಯಿ ಆಸ್ತಿ ಸುಟ್ಟು ಹೋಗಿದೆ. ನೀವು ಹುಬ್ಬಳ್ಳಿಯಿಂದ ಈಗ ಇನ್‌ಫರ್ಮೇಷನ್ ತರಿಸಿಕೊಳ್ಳಿ. ಅವರು ಮಾತನಾಡುವಂತಹ ಸಂದರ್ಭದಲ್ಲಿ ಅಶೋಕ್ ಕಾಟ್ವೆ ಎನ್ನುವಂತಹ ನಮ್ಮ ಶಾಸಕರ ಮನೆ ಮೇಲೆ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹಲ್ಲೆ ಮಾಡಿದರು, ಒಬ್ಬ ಗೌರವಾನ್ವಿತ ಸದಸ್ಯನ ಮನೆ ಮೇಲೆ ಈ ರೀತಿ ಮಾಡಿದ್ದಾರೆ,

ಅದನ್ನು ನಾನು ಬೆಳಿಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅಲ್ಲಿ ಪ್ರತಿನಿಧಿಸುವಂತಹ ಒಬ್ಬ ಶಾಸಕನ ಬಗ್ಗೆ ತಾವು ಗಮನವನ್ನು ಕೊಟ್ಟು ತಮ್ಮ ಉತ್ತರದಲ್ಲಿ ಒಂದು ಶಬ್ದ ಮಾತನಾಡಲಿಲ್ಲ. ಅದಕ್ಕಾಗಿ ನಾನು ಹೇಳುವುದಕ್ಕೆ ಇಚ್ಛೆಪಡುವಂಥಾದ್ದು, ಇವರ ಸರ್ಕಾರ ಆಡಳಿತಕ್ಕೆ ಬಂದು ಇನ್ನು ನೂರು ದಿವಸ ಆಗಿಲ್ಲ. ಲಾ ಆಂಡ್ ಆರ್ಡರ್ ಸಿಚ್ಯುಯೇಷನ್ ಹಾಳಾಗಿ ಹೋಗುತ್ತಿದೆ, ನಾವು ಎಲ್ಲಾ ರೀತಿಯಿಂದಲೂ ಸಹಕಾರ ಕೊಡುವುದಕ್ಕೆ ಸಿದ್ದರಿದ್ದೇವೆ ಎಂದು ಹೇಳಿದ್ದೇವೆ. ಆ ದಿನ ಅಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸುವುದನ್ನು ತಡೆಯುವುದಕ್ಕೆ ಬೇಕಾದಷ್ಟು ಪೋಲೀಸ್ ಬಂದೋಬಸ್ತ್ ಹಿಂದಿನ ಸರ್ಕಾರ ಮಾಡಿತು. ಇಂತಹ ಒಂದು ಪರಿಸ್ಥಿತಿ ಬಂದಿದೆ ಎನ್ನುವುದಾದರೆ ಆ ಪರಿಸ್ಥಿತಿಯನ್ನು ತಡೆಯುವುದಕ್ಕೆ ಬೇಕಾದಂತಹ ಪೂರ್ಣ ಬಂದೋಬಸ್ತ್ ಏಕೆ ಮಾಡುತ್ತಾ ಇಲ್ಲ. ಏಕೆ ಎಲ್ಲವನ್ನೂ ನಡೆಯುವುದಕ್ಕೆ ಬಿಟ್ಟು ಕೈ ಕಟ್ಟಿಕೊಂಡು ನೋಡುವಂತಹ ಪರಿಸ್ಥಿತಿ ಬಂದಿದೆ. ಅಥವಾ ಅಲ್ಲಿ ಜನ ಮಾತನಾಡುತ್ತಿದ್ದಾರೆ, ಬಿ. ಜೆ. ಪಿ. ಶಾಸಕರು ಹುಬ್ಬಳ್ಳಿಯಲ್ಲಿ ಧಾರವಾಡದಲ್ಲಿ ಗೆದ್ದು ಬಂದಿದ್ದಾರೆ. ಅದಕ್ಕೆ ಲಾ ಆಂಡ್ ಆರ್ಡರ್ ಸಿಚ್ಯುಯೇಷನ್ ಹಾಳಾಗಿ ಹೋಗಲಿ, ನೋಡಿ ಬಿ. ಜೆ. ಪಿ. ಯವರು ಗೆದ್ದಿದ್ದರೆ ಏನಾಯಿತು; ಅವರಿಗೆ ಕೆಟ್ಟ ಹೆಸರು ಬರಬೇಕು ಎಂದು ಹೇಳಿ ಈ ರೀತಿಯ ವಾತಾವರಣವನ್ನು ಮೂಡುತ್ತಿದೆಯೇನೋ ಎಂಬ ಭಾವನೆ ಜನರಲ್ಲಿ ಬರುತ್ತಿದೆ. ಇಲ್ಲಿರುವ ಶಾಸಕರು ಸರ್ಕಾರದಿಂದ ಒಂದು ರಕ್ಷಣೆ ಕೊಡಿಸುವುದಕ್ಕೆ ಆಗುತ್ತಿಲ್ಲ ಎನ್ನುವಂತಹ ಮಾತು ಬರುತ್ತದೆ. ಆರೋಪಕ್ಕೆ ನಮ್ಮನ್ನು ಗುರಿ ಮಾಡಬೇಕು, ಈ ಎಲ್ಲಾ ಅವ್ಯವಸ್ಥೆ ಆಗಿ ಶಾಂತಿ ಸುವ್ಯವಸ್ಥೆ ಹಾಳಾಗಿ ಮತ್ತೆ ಪ್ರಕ್ಷುಬ್ಧ ಪರಿಸ್ಥಿತಿ ಅಲ್ಲಿ ಬರಬೇಕು ಎಂದು ಅಪೇಕ್ಷೆ ಇದೆ ಎಂದು ನಾನು ಗೃಹ ಸಚಿವರ ಬಗ್ಗೆ ಅಪೇಕ್ಷೆ ಪಡುವುದಿಲ್ಲ. ಆದರೆ ಅವರೇ ಹೋಗಿ ಬಂದಿದ್ದರೂ, ನೀವು ಪೋಲೀಸ್ ಬಿಗಿ ಬಂದೋಬಸ್ತ್ ಮಾಡಿದ್ದೀರಿ. ಉನ್ನತಾಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೀರಿ. ಅದು ಈ ನಿಮಿಷದಿಂದ ಮರುಕಳಿಸದಂತೆ ಅಲ್ಲಿ ಕ್ರಮ ಕೈಗೊಳ್ಳಬೇಕಾಗಿತ್ತು. ಯಾರಿಗೇ ಲಾಸ್ ಆಗಿರಲಿ ಅವನು ಯಾವುದೇ ಜಾತಿಯವನು ಇರಲಿ, ನಾವೆಲ್ಲಾ ಮನುಷ್ಯ ಜಾತಿಗೆ ಸೇರಿದಂತಹವರು. ಆದುದರಿಂದ ಅದನ್ನು ಸರಿಪಡಿಸುವುದಕ್ಕೆ ನಾವು ಈ ಸದನದಲ್ಲಿ ಏನು ಮಾಡುವುದು. ಅಲ್ಲಿ 40, 50 ಲಕ್ಷ ರೂಪಾಯಿ ಲಾಸ್ ಆಗಿರುವಂತಹ ಮನುಷ್ಯ ಅವನೊಬ್ಬ ನಾಗರೀಕ ತಾನೆ? ಅವರು ಯಾರೇ ಇರಬಹುದು. ಒಬ್ಬ ಶಾಸಕನ ಮನೆ ಮೇಲೆ ಹಲ್ಲೆ ಆಗುತ್ತದೆ, ನಾನು ಸರ್ಕಾರವನ್ನು ಕೇಳುತ್ತೇನೆ, ಇವತ್ತು ಏನು ರಕ್ಷಣೆ ಕೊಟ್ಟಿರಿ? ಮಾನ್ಯ ಗೃಹ ಸಚಿವರೇ, ತಾವು ಹಿಂದಿನ ರೆಕಾರ್ಡ್ ಅನ್ನು ತರಿಸಿ ನೋಡಿ. ಹಿಂದೆ ಇದೇ ರಾಷ್ಟ್ರ ಧ್ವಜ ಹಾರಿಸಲು ಹೋದಂಥ ಘಟನೆಯ ಸಂದರ್ಭದಲ್ಲಿ ಗೋಲಿಬಾರ್ ಆದಾಗ ಇದೇ ಅಶೋಕ್ ಕಾಟ್ವೆಯವರ ಪಕ್ಕದಲ್ಲಿದ್ದಂತಹ ಒಬ್ಬ ಹೆಣ್ಣು ಮಗಳು ಸತ್ತಳು. ಇದು ದಾಖಲೆಯಲ್ಲಿದೆ, ತಾವು ತರಿಸಿ ನೋಡಿ. ಅವತ್ತು ವ್ಯಾನ್‌ನಲ್ಲಿದ್ದಂತಹ ಒಬ್ಬ ಡ್ರೈವರ್ ಪಿಸ್ತೂಲ್ ತೆಗೆದು ಗುಂಡು ಹಾರಿಸಿದ; ಅದು ಪಕ್ಕದಲ್ಲಿದ್ದಂತಹ ಹೆಣ್ಣು ಮಗಳಿಗೆ ತಾಕಿತು, 100 ಅಡಿಯ ಅಂತರದಲ್ಲಿದ್ದಂತಹ ಅಶೋಕ್ ಕಾಟ್ವೆಯವರಿಗೆ ಅದು ತಪ್ಪಿತು. ಇದು ಹೌದೋ ಅಲ್ಲವೋ ತಾವು ರೆಕಾರ್ಡ್ ತರಿಸಿ ನೋಡಿ. ಈ ಪರಿಸ್ಥಿತಿ ಇರಬೇಕಾದರೆ ಆ ಶಾಸಕರ ರಕ್ಷಣೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ದಯಮಾಡಿ ಈ ವಿವರಗಳನ್ನು ತಾವು ನಮಗೆ ಹೇಳಬೇಕಾಗುತ್ತದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ನನ್ನದು ಎರಡು ಪ್ರಶ್ನೆಗಳಿವೆ, ಮೊಲ್ಲಾರ್ ಓಣಿಯಲ್ಲಿ ಒಬ್ಬ ಅಮಾಯಕ ಮಸೀದಿಯಿಂದ ಹೊರಗೆ ಬಂದ ಕೂಡಲೇ ಈ ಘಟನೆ ನಡೆದಿದೆ. ಅಂದರೆ ಅವರು ಹೊರಗಡೆ ಬಂದು ಪ್ರತಿಭಟಿಸಿದಾಗ ಅವರನ್ನು ಕೊಂದಿದ್ದಾರೆ. ಹೊರಗೆ ಬಂದ ಕೂಡಲೇ he was stoned to death. ಇದಕ್ಕೆ ಕಾರಣಾರು ಎಂದು ಗುರುತಿಸಿ ಪೋಲೀಸ್‌ನವರಿಗೆ ಸರಿಯಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಯಾರು ಕೊಂದಿದ್ದಾರೆ ಎಂದು ಹೇಳಿ ಸಸ್ಪೆಕ್ಟ್ ಆಗಿದ್ದಾರೆ ಅವರು ಪ್ರತಿಷ್ಠಿತ ವ್ಯಕ್ತಿಯೊಂದಿಗೆ ರಾಜಾರೋಷವಾಗಿ ಶಾಂತಿಯನ್ನು ಕಾಪಾಡುವುದಕ್ಕೆ ಅಲ್ಲಿ ತಿರುಗಾಡುತ್ತಿದ್ದಾರೆ. ಆ ವ್ಯಕ್ತಿಯನ್ನು ಗುರುತಿಸಿದ್ದಾರೆ, ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೂ ಈ ವ್ಯಕ್ತಿ ತಿರುಗಾಡುತ್ತಿರುವಂಥಾದ್ದು ಗೊತ್ತಾಗಿದೆ. I just wanted to confirm that individual's vehicle, ಅದನ್ನು ನಾವು ಫೋನ್ ಮಾಡಿ ತಿಳಿದುಕೊಂಡಿದ್ದೇವೆ. ಇನ್ನೂ ಮೂರು ಆಟೋ ರಿಕ್ಷಾಗಳನ್ನು ಕೆ.ಎಮ್.ಸಿ.ಹತ್ತಿರ ಸುಟ್ಟುಹಾಕಿದ್ದಾರೆ. I think consequently, ಯಾರಿಗೋ ಒಬ್ಬರಿಗೆ ಏಟಾಗಿದೆ, ಅಲ್ಲಿ ಕೂಡ again the culprits have been identified. ಆ ಮಾಹಿತಿಯನ್ನು ಪೋಲೀಸಿನವರಿಗೆ ಕೊಟ್ಟಿದ್ದಾರೆ. ಈ ಎರಡು ಮಾಹಿತಿಗಳನ್ನು ಪೋಲೀಸಿನವರಿಗೆ ಕೊಟ್ಟಿದ್ದರೂ ಕೂಡ ಇವತ್ತಿನವರೆಗೂ ಅವರನ್ನು interrogate ಮಾಡುವುದಕ್ಕೆ ಕರೆಯಿಸಲಿಲ್ಲ ಮತ್ತು ಅವರನ್ನು ಬಂಧನದಲ್ಲೂ ಇಟ್ಟಿಲ್ಲ. ಆದುದರಿಂದ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಕ್ಷಮಿಸಿ ಮೂರನೆಯದಾಗಿ ಯಾರು ಎಷ್ಟೇ ಶಕ್ತಿವಂತರಾಗಿರಲಿ, ಯಾವ ವರ್ಗದವರೇ ಆಗಲಿ, ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಏಕೆಂದರೆ ಇದು ಹಗಲಿನಲ್ಲೇ ರಾಜರೋಷವಾಗಿ ನಡೆದಿದೆ. ಯಾರು ಇದಕ್ಕೆ ಕಾರಣೀಭೂತರಾಗಿದ್ದಾರೆ, ಪ್ರೇರಣೆ ಕೊಟ್ಟಿದ್ದಾರೆ, ಸ್ಪೂರ್ತಿ ಕೊಟ್ಟಿದ್ದಾರೆ ಅವರು ವ್ಯಕ್ತಿಗಳೇ ಇರಲಿ, ಶಕ್ತಿಗಳೇ ಇರಲಿ ಅವರನ್ನು ಹಿಂದಿಟ್ಟುಕೊಳ್ಳುವುದಕ್ಕೆ ನಿಮಗೆ ಏನು ಕಷ್ಟ, ಈ ರೀತಿಯಾದರೆ ನೀವು ಯಾವ ರೀತಿ ಶಾಂತಿಯನ್ನು ಕಾಪಾಡುತೀರಿ ? ಅವರನ್ನೆಲ್ಲಾ ರಾಜಾರೋಷವಾಗಿ ಬಿಟ್ಟು ತಾವು ಶಾಂತಿ ಕಾಪಾಡುತ್ತೇವೆಂದರೆ ನನಗಂತೂ ಈ ಶಾಂತಿಯನ್ನು ಕಾಪಾಡುವುದರಲ್ಲಿ ವಿಶ್ವಾಸವಿಲ್ಲ. ಮತ್ತೆ ನಿರಪರಾಧಿ ಜನರು ಯಾರಿದ್ದಾರೆ ಅವರನ್ನು ಬಂಧನ ಮಾಡುತ್ತಿದ್ದಾರೆ. ಯಾರನ್ನು ಹಿಡಿಯಬೇಕೋ ಅವರನ್ನು ಹಿಡಿಯುತ್ತಿಲ್ಲ. ದಿನಕ್ಕೆ 20 ಜನರನ್ನು ಹಿಡಿದು ಒಳಗೆ ಹಾಕುವುದು, ಇವತ್ತು 500 ಜನರನ್ನು ಹಿಡಿದು ಒಳಗೆ ಹಾಕಿದ್ದೀರಿ. ಆದುದರಿಂದ ದಯಮಾಡಿ ಸರ್ಕಾರ ಇದನ್ನು ಪರಿಶೀಲಿಸಬೇಕಾಗಿ ತಿಳಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪ ಮೊಯಿಲಿಯವರು ಏನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲಿ ನಾನು ರಾಜಕೀಯ ಬೆರೆಸುವುದಕ್ಕೆ ಇಚ್ಛಿಸುವುದಿಲ್ಲ. ನಾನು ಇದನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಅಕಸ್ಮಾತ್ ನನ್ನ ಕಡೆಯಿಂದ ತಪ್ಪಾಗಿದ್ದರೆ, ಗೊತ್ತಿಲ್ಲದೆ ತಪ್ಪಾಗಿರತಕ್ಕದ್ದು; ನಾನು ಅಲ್ಲಿ ಹೋಗಿ ಏನು ಕಣ್ಣಾರೆ ನೋಡಿದ್ದೇನೆ, ಕಿವಿಯಲ್ಲಿ ಏನು ಕೇಳಿದ್ದೇನೆ ಮತ್ತು ಆತ್ಮ ಸಾಕ್ಷಿಯಾಗಿ ನಾನು

ಕೆಲಸ ಮಾಡಿದ್ದೇನೆ. ಇವತ್ತು ಮಾನ್ಯ ವೀರಪ್ಪ ಮೊಯಿಲಿಯವರು ಮೊಲ್ಲಾರ್ ಓಣಿಯಲ್ಲಿ ನಡೆದಂತಹ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ಮೆರವಣಿಗೆ ಸುಮಾರು ಹನ್ನೆರಡೂವರೆ-ಹನ್ನೆರಡೂ ಮುಕ್ಕಾಲು ಸಮಯದಲ್ಲಿ ಮುಗಿದಿದೆ. ಈ ಬಗ್ಗೆ ಒಂದು ಗಂಟೆಗೆ ಪೋಲೀಸ್ ಕಮೀಷನರ್ ಅವರು ಡಿ.ಜಿ.ಪಿ.ಯವರಿಗೆ ಫೋನ್ ಮಾಡಿ ಯಾವುದೇ ಅಹಿತಕರ ಘಟನೆಗಳಾಗದೆ ಎಲ್ಲಾ ಡಿಸ್ಪರ್ಸ್ ಆದರು ಎಂದು ಹೇಳಿದ್ದಾರೆ. ಈ ಘಟನೆ 1.30 ರಿಂದ 1.45ರ ಒಳಗಡೆ ನಡೆದಿದೆ. ಮೆರವಣಿಗೆ ಮುಗಿದ ಮೇಲೆ ಹೋಳಿಯ ಪ್ರಯುಕ್ತ ಬಣ್ಣ ಎರಚುವಂತಹ ಸಮಯದಲ್ಲಿ ಆಗಿರತಕ್ಕಂಥಾದ್ದು. ಅವರು ಮಸೀದಿಯಿಂದ ಹೊರಗಡೆ ಬಂದಂತಹ ಸಂದರ್ಭದಲ್ಲಿ .ಆದಂತಹ ಘಟನೆ ಬಗ್ಗೆ ತಾವು ಏನು ಹೇಳಿದ್ದೀರಿ ಅದನ್ನು ಇದುವರೆಗೂ ಐಡೆಂಟಿಫೈ ಮಾಡಿದ್ದೇವೆಂದು ನಾನು ಅಲ್ಲಿ ಇರುವವರೆಗೂ ಯಾರೂ ಬಂದು ಹೇಳಿಲ್ಲ. ಅದನ್ನು ನನಗೆ ಹೇಳುವುದು ಬೇಕಾಗಿಲ್ಲ, ಇದನ್ನು ಡಿ.ಜಿ.ಪಿ.ಯವರಿಗೂ ಹೇಳಿಲ್ಲ, ಎ.ಡಿ.ಜಿ.ಪಿ.ಯವರಿಗೂ ಹೇಳಿಲ್ಲ. ಅವರು ಈಗಲೂ ಅಲ್ಲೇ ಇದ್ದಾರೆ. ಅವರಿಗೆ ಹೇಳಲಿ. ಅವರು ಅದನ್ನು ತಿಳಿಸಿದರೆ ನಾನು ಖಂಡಿತವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅವರು ಎಷ್ಟೇ ದೊಡ್ಡವರಾಗಿರಲಿ, ನಾವು ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಆಟೋ ರಿಕ್ಷಾವನ್ನು ಸುಟ್ಟು ಹಾಕಿರುವಂತಹ ಪ್ರಕರಣದ ಬಗ್ಗೆ ಹೇಳಿದ್ದೀರಿ. ಅದರ ಬಗ್ಗೆ ನಮ್ಮ ಸ್ವಲ್ಪ ಮಾಹಿತಿ ಸಿಕ್ಕಿದೆ. ಈಗ ಅದನ್ನು ತಡೆಗಟ್ಟಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಂಡಿದ್ದೇವೆ. ಇದಕ್ಕೆ ಕಾರಣಿಭೂತರಾಗಿರತಕ್ಕಂಥವರು ಯಾರಿದ್ದಾರೆ ಅವರು ಶಾಂತಿಗೋಸ್ಕರ ಓಡಾಡುತ್ತಿದ್ದಾರೆ ಎನ್ನುವಂತಹ ವಿಚಾರವೇನಿದೆ, ಇದು ಹೊಸ ವಿಚಾರ ನನ್ನ ಮಟ್ಟಿಗೆ, ಆ ರೀತಿ ಏನಾದರೂ ಇದ್ದರೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾವು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ. ನಾನು ಇನ್ನೋಸೆಂಟ್‌ಗಳನ್ನು ಅರೆಸ್ಟ್ ಮಾಡಿಯೇ ಇಲ್ಲ, 500 ಜನರನ್ನು ಕರೆಕ್ಟಾಗಿ ಅರೆಸ್ಟ್ ಮಾಡಿದ್ದಾರೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ಈ ಸಂದರ್ಭದಲ್ಲಿ ಇಂಥವರು ನಿರಪರಾಧಿಗಳು, ಇಂಥವರು ಅಪರಾಧಿಗಳು, ಇವರನ್ನು ಬಿಡಿ ಅಥವಾ ಸೇರಿಸಿ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಇದರಲ್ಲಿ ಒಂದೆರಡು ಜನರು ನಿರಪರಾಧಿಗಳು ಇರಬಹುದು. .ಅದಕ್ಕೋಸ್ಕರ ನಾನು ಅವರನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಹೇಳಿದ್ದೇನೆ. 2-3 ದಿವಸಗಳಾದ ಮೇಲೆ ಗೊತ್ತಾಗುತ್ತದೆ. ಅದಕ್ಕೋಸ್ಕರ ಉನ್ನತ ಅಧಿಕಾರಿಗಳನ್ನು ಇಟ್ಟಿದ್ದೇವೆ. ಒಂದೊಂದು ಪೋಲೀಸ್ ಸ್ಟೇಷನ್‌ಗೂ ಒಬ್ಬೊಬ್ಬ ಎಸ್.ಪಿ.ಗಳನ್ನು ಹಾಕಿದ್ದೇವೆ. ಸಿ.ಆರ್.ಪಿ.ಎಫ್.ಅನ್ನು ಕರೆಯಿಸಿದ್ದೇವೆ. ರ್‍ಯಾಪಿಡ್ ಆಕ್ಷನ್ ಫೋರ್ಸ್‌ನ್ನು ಕೆಲಸ ಪ್ರಾರಂಭ ಮಾಡಿದೆ. ಆದರೂ ಸಹ ಇವತ್ತು ಮಧ್ಯಾಹ್ನ ಬಂದಿರುವಂತಹ ವರದಿ ಪ್ರಕಾರ ಗಂಟೆ 1.45ರ ಸಮಯದಲ್ಲಿ ಕೆ.ಎಸ್.ಆರ್.ಟಿ.ಸಿ.ಬಸ್‌ನಲ್ಲಿ ಒಬ್ಬ ಪ್ಯಾಸೆಂಜರ್ ನೆಪದಲ್ಲಿ ಒಂದು ಸಾಫ್ಟ್ ಡ್ರಿಂಕ್ಸ್ ಅಂದರೆ ಸಿಟ್ರಾ ಬಾಟಲ್ ತೆಗೆದುಕೊಂಡು ಹೋಗುತ್ತಿದ್ದೇನೆಂದು ಹತಳಿ ಅದರಲ್ಲಿ ಸೀಮೆ ಎಣ್ಣೆ ಹಾಕಿಕೊಂಡು ಅದನ್ನು ಸೀಟಿನ ಮೇಲೆ ಸುರಿದು ಬೆಂಕಿ ಹಚ್ಚುವುದಕ್ಕೆ ಪ್ರಯತ್ನ ಮಾಡಿದ್ದಾನೆ. ಅವನನ್ನು ತಕ್ಷಣ ಬಸ್ಸಿನ ಡ್ರೈವರ್‌ಗಳು, ಕಂಡಕ್ಟರ್‌ಗಳು, ಕೆ.ಎಸ್.ಆರ್.ಟಿ.ಸಿ.ಸಿಬ್ಬಂದಿಗಳು ಹಿಡಿದುಕೊಂಡು ಅರೆಸ್ಟ್ ಮಾಡಿದ್ದಾರೆ. ಈಗ ಹುಬ್ಬಳ್ಳಿ ಮಾಮೂಲಿ ಸ್ಥಿತಿಗೆ ಮರಳಿದೆ, ಬಸ್ಸುಗಳು

ಓಡಾಡುತ್ತಿದೆ, ಶಾಲೆಗಳು ನಡೆಯುತ್ತಿವೆ, ಕಾಲೇಜುಗಳು ನಡೆಯುತ್ತಿವೆ. ಆದರೂ ಈಗ ಘಟನೆಗಳು ನಡೆದಿವೆ. ಈಗ ಅರೆಸ್ಟ್ ಆದವರು ಯಾರು ಏನು ಎಂದು ಹೇಳುವುದರಿಂದ ಪರಿಸ್ಥಿತಿ ಏನಾಗುತ್ತದೆ ಎಂಬುದು ತಮಗೆ ಗೊತ್ತಿದೆ. ಅನೇಕ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಮೊದಲು ಅಲ್ಲಿ ನಾನು ಶಾಂತಿಯನ್ನು ತರಬೇಕು. ಆ ದೃಷ್ಟಿಯಿಂದ ನಾವು ಇವತ್ತು ಸರ್ಕಾರ ಸುಮ್ಮನೆ ಇರಬೇಕಾಗುತ್ತದೆ. ನಾವು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಿದ್ದೇವೆ. ನಮಗೂ ನೋವಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಇಡೀ ರಾಷ್ಟ್ರದ ರಾಜ್ಯದ ಎಲ್ಲಾ ಜನರ ಸಹಕಾರವನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ತಮಗೂ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ. ಜನ ನಮ್ಮನ್ನು ಅಭಿನಂದಿಸಿದ್ದಾರೆ. ಇದರಲ್ಲಿ ಯಾವುದೇ ರೀತಿಯ ರಾಜಕೀಯವನ್ನು ಬೆರೆಸುವುದಕ್ಕೆ ಪ್ರಯತ್ನ ಮಾಡಲಿಲ್ಲ. ರಾಜ್ಯದಲ್ಲಿ ಶಾಂತಿಯನ್ನು ತರುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಅದಕ್ಕೆ ಒಂದು ಧಕ್ಕೆ ಬಂದಿದೆ ಎನ್ನುವಂತಹ ನೋವು ನಮಗೂ ಇದೆ. ಆದುದರಿಂದ ತಕ್ಷಣ ನಾವು ನಿಯಂತ್ರಣಕ್ಕೆ ತರುವುದಕ್ಕೆ ಏನು ಮಾಡಬೇಕು ಅದನ್ನು ನಾವು ಮಾಡುತ್ತೇವೆ. ಅವರು ಯಾರೇ ಆಗಿರಲಿ, ಯಾವುದೇ ಪಕ್ಷವಾಗಲಿ, ಯಾವುದೇ ವರ್ಗವಾಗಲಿ ನಾವು ಯಾರ ಒತ್ತಾಯಕ್ಕೂ ಮಣಿಯುವುದಿಲ್ಲವೆಂಬ ಭರವಸೆಯನ್ನು ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು :- ನಮ್ಮ ನಾಯಕರು ಹೇಳಿರುವಂತಹ ಪ್ರಶ್ನೆಗಳಿಗೆ ಒಂದಕ್ಕೂ ಉತ್ತರ ಇಲ್ಲದಿರುವುದನ್ನು ನೋಡಿದರೆ ನಿಮ್ಮ ಉದ್ದೇಶ ಏನು ?

ಉಪಾಧ್ಯಕ್ಷರು :- ನಿಮ್ಮದು ಏನು ?

ಶ್ರೀ ಜಿ.ವಿ.ಶ್ರೀರಾಂ ರೆಡ್ಡಿ:- ಉದ್ದೇಶಪೂರ್ವಕವಾಗಿ ಈಗ ಏನಾದರೂ ಮಾಡುತ್ತಿದ್ದರೆ ದಯವಿಟ್ಟು ಹೇಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಮಾನ್ಯ ಅಶೋಕ್ ಕಾಟ್ವೆಯವರ ಮೇಲೆ ಹಲ್ಲೆಯಾಗಿದೆ ಎನ್ನುವಂತಹ ಹೊಸ ಸುದ್ದಿಯನ್ನು ನನಗೆ ಕೊಟ್ಟಿದ್ದೀರಿ. ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ತಿಳಿದುಕೊಂಡು ಬಂದು ನನಗೆ ಹೇಳಿ ಎಂದು. ಅಶೋಕ್ ಕಾಟ್ವೆರವರು ಇರಬಹುದು; ಕಾಳೆಗುಡ್ಡೆಯವರು ಎಂದೂ ಸಹ ಹೇಳಿದರು. ಯಾರ್‍ಯಾರಿಗೆ ರಕ್ಷಣೆ ಕೊಡಬೇಕು ಅವರಿಗೆ ರಕ್ಷಣೆ ಕೊಡುವ ಬಗ್ಗೆ ನಾನು ತಿಳಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಇದನ್ನು ನಾನು ಇಲ್ಲಿ ಬೆಳಿಗ್ಗೆ ಪ್ರಸ್ತಾಪ ಮಾಡಿದ್ದೆ. ನಮ್ಮ ಶಾಸಕರು ಅಶೋಕ್ ಕಾಟ್ವೆಯವರ ಮನೆಯ ಮೇಲೆ ಹಲ್ಲೆಯಾಗಿದೆ ಎಂದು ಹೇಳಿದ್ದೇನೆ. ಈಗ 4.15ರ ಸಮಯದಲ್ಲಿದ್ದೇವೆ. ಗೃಹ ಸಚಿವರೇ ತಾವು ಇಲ್ಲಿದ್ದೀರಿ, ಒಬ್ಬ ಗೌರವಾನ್ವಿತ ಶಾಸಕರ ಮನೆಯ ಮೇಲೆ ಹಲ್ಲೆಯಾಗಿದೆ ಎಂದು ನಾವು ಹೇಳಿದಾಗ ಇನ್ನೂ ನಿಮಗೆ ಇನ್‌ಫರ್‌ಮೇಷನ್ ಬಂದಿಲ್ಲವೆಂದರೆ ನಮ್ಮನ್ನು ಎಷ್ಟರ ಮಟ್ಟಿಗೆ ಬೇರೆ ಬೇರೆ ಮುಖದಲ್ಲಿ, ಬೇರೆ ಬೇರೆ ರೀತಿಯಲ್ಲಿ ನೋಡುತ್ತಿದ್ದೀರಿ

ಎಂಬುದು ಗೊತ್ತಾಗುತ್ತದೆ. ತಾವು ಅಲ್ಲಿ ಕುಳಿತು ನಮಗೆ ರಕ್ಷಣೆ ಕೊಡಬೇಕು. ಈ ಸದನದ ಒಬ್ಬ ಸದಸ್ಯರ ಮರ್ಯಾದೆಯ ಪ್ರಶ್ನೆ. ಅವರ ಮನೆಯ ಮೇಲೆ ಹಲ್ಲೆಯಾಗಿದೆ ಎನ್ನುವಂತಹ ಪ್ರಶ್ನೆ ಹೇಳಿದೆ ಮತ್ತು ಇನ್ನೊಂದು ನೇಮಿಚಂದ್ ಕಂಪನಿಗೆ ಬೆಂಕಿ ಹಚ್ಚಿದ್ದಾರೆ ಹಾಗೂ ಸುಮಾರು 40-50 ಲಕ್ಷ ರೂ.ಗಳ ಲೂಟಿಯಾಗಿದೆ ಎಂದು ಹೇಳಿದೆ. ಇದು ನಡೆದಿರುವುದು ಇವತ್ತಲ್ಲ. ನಿನ್ನೆ ಅಲ್ಲ. ಮೊನ್ನೆ. ಒಬ್ಬ ಗೌರವಾನ್ವಿತ ಶಾಸಕರ ಮನೆಯ ಮೇಲೆ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹೋಗಿ ಹಲ್ಲೆ ಮಾಡಿದ್ದು ನಿಮಗೆ ಗೊತ್ತಿಲ್ಲ, ಒಬ್ಬ ಅಂಗಡಿಯಲ್ಲಿ 40-50 ಲಕ್ಷ ರೂ. ಲೂಟಿಯಾಗಿರುವಾಗ ನಿಮ್ಮ ಪೋಲೀಸ್‌ನವರು ವರದಿ ಕೊಡುವುದಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿ ಬೆಳಿಗ್ಗೆ ಪ್ರಸ್ತಾಪ ಮಾಡಿದ್ದರೆ ಅದನ್ನು ನೆನೆಸುವುದಕ್ಕೆ ಹಾಗೂ ಅದಕ್ಕೆ ಒಂದು ಶಬ್ದ ಉತ್ತರ ಕೊಡುವುದಕ್ಕೂ ಸಿದ್ಧವಿಲ್ಲ. ಗೃಹ ಸಚಿವರೇ, ನಾವು ರಾಜಕಾರಣವನ್ನು ಮಾಡೋಣ, ನೀವು ಮಾಡಿ, ನೀವೂ ಮಾಡುತ್ತೀರಿ, ನಾವು ಮಾಡುತ್ತೇವೆ. ಆದರೆ ಇಂತಹ ಸಂದರ್ಭ ಬಂದಾಗ ಒಂದು ಮಾನವೀಯ ದೃಷ್ಟಿಯಿಂದ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ನಾವು ಯೋಚನೆಯನ್ನು ಮಾಡುತ್ತಿರುವಂತಹ ಕಾಲದಲ್ಲಿ ನಾನು ನಿಮ್ಮನ್ನು ಕೇಳುತ್ತೇನೆ. ನಮ್ಮ ಗೌರವಾನ್ವಿತ ಸದಸ್ಯರು ಹೇಳಿದರು, ಅದು ಯಾವುದೋ ರಸ್ತೆಯಲ್ಲಿ, ಹೋಗದೇ ಇರುವ ರಸ್ತೆಯಲ್ಲಿ ಹೋದರು ಎಂದು. ನಿಜವೇ ಹೇಳಿ. ಅದು ಸತ್ಯ ಅಲ್ಲ. ಎಲ್ಲಿ ಮೆರವಣಿಗೆ ಆಯಿತೋ ಅಲ್ಲಿ ಆಯಿತು, ಇಲ್ಲದೆ ಇದ್ದರೆ ಹೇಳಿ you please come out. ಎರಡನೆಯದು, ಸಪೋಸ್ ಇವತ್ತು ಅನೇಕ ಜನ ಬೇರೆ ಬೇರೆ ಸಮಾಜದ ಬಂಧುಗಳು, ಇವತ್ತು ಎಲ್ಲೋ ಅಲ್ಪ ಸಂಖ್ಯಾತರ ನಾಲ್ಕು ಮನೆಗಳು ಇದ್ದಾವೆ, ಬಹು ಸಂಖ್ಯಾತರ ಐದು ನೂರು ಮನೆಗಳು ಇವೆ. ಆ ನಮ್ಮ ಅಲ್ಪ ಸಂಖ್ಯಾತರು ಹಬ್ಬ ಹರಿದಿನಗಳನ್ನು ಇಡೀ ಊರಿನಲ್ಲಿ ಮಾಡುತ್ತಾರೆ. ಯಾರೂ ಅಡ್ಡಿ ಆತಂಕಗಳನ್ನು ಮಾಡುವುದಿಲ್ಲ. ಆದರೆ ಈ ಸ್ವತಂತ್ರ ಭಾರತದಲ್ಲಿ ಎಲ್ಲಿ ಮೆರವಣಿಗೆ ಆಗಬೇಕು, ಎಲ್ಲಿ ಮೆರವಣಿಗೆ ಆಗಬಾರದು, ಆ ರಸ್ತೆಯಲ್ಲಿ ಹೋಗಬಾರದು, ಈ ರಸ್ತೆಯಲ್ಲಿ ಹೋಗಬಾರದು, ಒಂದು ಪಟ್ಟಿಯನ್ನು ಮಾಡಿ ಬಿಡಿ ಸ್ವಾಮಿ ಯಾರ್‍ಯಾರು ಯಾವ ರಸ್ತೆಯಲ್ಲಿ ಮೆರವಣಿಗೆ ಮಾಡಬೇಕು ಎಂದು. ಈ ಜಾತಿಗೆ ವಿಷ ಬೀಜವನ್ನು ಬಿತ್ತಿ ಅದರ ಲಾಭವನ್ನು ಮಾಡಿಕೊಳ್ಳುವಂಥದನ್ನು ಹತ್ತಿಕ್ಕುವಂಥ ಒಂದು ಪ್ರಾಮಾಣಿಕ ಪ್ರಯತ್ನ ಆಗಬೇಕಾಗಿತ್ತು. ಅದರ ಬದಲಿಗೆ ಈ ಸದನದ ಒಳಗೆ ನಾವು ಕುಳಿತು ಇವರಿಗೆ ಚಿತಾವಣೆಗೆ ತರುವ ರೀತಿಯಲ್ಲಿ ಮಾತನಾಡುತ್ತಾ, ಅಲ್ಲಿ ಬಂದರು ಆ ರಸ್ತೆಯಲ್ಲಿ ಹೋಗಬಾರದಾಗಿತ್ತು, ಆ ರಸ್ತೆಯಲ್ಲಿ ಬಂದರು ಈ ತರಹ ಹೋಗಬಾರದಾಗಿತ್ತು, ಇದು ಯಾರಿಗೆ ಗೌರವ ತರುವಂಥ ಸಂಗತಿ ? ಅದಕ್ಕಾಗಿ ನಾನು ಸನ್ಮಾನ್ಯ ಗೃಹ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಅಲ್ಲಿಗೆ ಹೋಗಿ ಬಂದಿರಿ, ನಾನು ನಿಮಗೊಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾಳೆ ಭಾನುವಾರ ಇದೆ ಒಂದು ಸದನದ ಸಮಿತಿಯನ್ನು ಮಾಡಿ, ಎಲ್ಲಾ ಪಕ್ಷದ ಮುಖಂಡರು ಹೋಗೋಣ, ವಾಸ್ತವಿಕ ಸ್ಥಿತಿಯನ್ನು ತಂದು ವರದಿ ಕೊಟ್ಟಾಗ ಇವತ್ತು ಯಾರ್‍ಯಾರು ಏನೇನು ಆರೋಪ ಮಾಡಿದ್ದಾರೆ ಅದರ ಸತ್ಯಾಸತ್ಯತೆ ಹೊರಗೆ ಬರುತ್ತದೆ. ಇಲ್ಲದೆ ಇದ್ದರೆ ಪೋಲಿಸ್ ಅಧಿಕಾರಿಗಳು ಏನು ಮಾಡುತ್ತಾರೆ ? ಆ ಪೊಲೀಸ್ ಅಧಿಕಾರಿಗಳು ಹೋಗಿ ಅವರು ಬರುತ್ತಾರೆ, ಅವರು

ಹೋಗಿ ಮತ್ತೊಬ್ಬರು ಬರುತ್ತಾರೆ, ಈ ರೀತಿ ಚಿತಾವಣೆ ಕೊಡುವಂಥ ಜನ ಯಾವ ಕಾಲಕ್ಕೆ ಬದಲಾವಣೆ ಆಗುತ್ತಾರೆ ? ಗೃಹ ಸಚಿವರು ನಮ್ಮ ಜೊತೆಯಲ್ಲಿ ಬರಲಿ, ಈಗಾಗಲೇ ಆರೋಪ ಮಾಡಿರುವ ನೀವೂ ಬನ್ನಿ, ಯಾರು ಅಂತಿಮವಾದ ತೀರ್ಮಾನ ಕೊಡಬೇಕು- ಅಲ್ಲಿರುವ ಜನ. ವಾಸ್ತವಿಕವಾದ ಸ್ಥಿತಿಯನ್ನು ನೋಡಿದಂಥವರು. ಹೋಗೋಣ ಬನ್ನಿ, ನಾವು ಇವತ್ತು ಹೊರಟು ಸೋಮವಾರ ಬೆಳಿಗ್ಗೆ ವಾಸ್ತವಿಕವನ್ನು ತಿಳಿದು, ನಿಮಗೆ ವರದಿಯನ್ನು ಕೊಡುತ್ತೇವೆ. ಆಗ ಪೋಲೀಸ್ ಅಧಿಕಾರಿಗಳು ತಪ್ಪು ಮಾಡಿದ್ದಾರೋ, ಬೇರೆ ಯಾರು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಇಂತಹ 40-50 ಲಕ್ಷದ ಒಂದು ಅಂಗಡಿಯನ್ನು ಲೂಟಿಯಾದರೆ ಪೋಲೀಸಿನವರು ವರದಿಯನ್ನು ಕೊಡುವುದಿಲ್ಲ. ಒಂದು ಗುಂಪಿಗೆ ನೀವು ರಕ್ಷಣೆ ಕೊಡುತ್ತೀರಿ, ಇನ್ನೊಂದು ಗುಂಪಿಗೆ ರಕ್ಷಣೆ ಕೊಡುವುದಿಲ್ಲ; ಆರೆಸ್ಟ್ ಮಾಡುವುದಿಲ್ಲ. ಇದರಿಂದ ಅಲ್ಲಿ ಏನಾಗುತ್ತದೆ ? ಶಾಂತಿ ಸುವ್ಯವಸ್ಥೆ ತರುವಂಥ ರೀತಿಯೇ ಇದು ? ಇದು ನಮಗೆ ಬಂದಿರುವ ವರದಿ; ಇದು ಸರಿ ಇಲ್ಲದಿರಬಹುದು, ಇದು ಸತತವಾಗಿ ಮೂರು ನಾಲ್ಕು ದಿವಸ ಮುಂದುವರಿಯುತ್ತದೆ. ದಯಮಾಡಿ ಒಂದು ಸದನ ಸಮಿತಿಯನ್ನು ಮಾಡಿ; ನಾವು ಹೋಗಿ ಬಂದು ಒಂದು ವರದಿಯನ್ನು ನಿಮಗೆ ಸೋಮವಾರದ ಬೆಳಿಗ್ಗೆ ಕೊಡುತ್ತೇವೆ. ಅದರ ಆಧಾರದ ಮೇಲೆ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳಲಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ನನ್ನ ಮೇಲೆ ಆರೋಪ ಇದೆ. ಅದಕ್ಕೆ ನಾನು ಉತ್ತರವನ್ನು ಹೇಳಿಬಿಡುತ್ತೇನೆ. ಆಮೇಲೆ ನೀವು ಏನು ಬೇಕಾದರೂ ಮಾತನಾಡಿ. ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ವಾಸ್ತವಿಕ ಪರಿಸ್ಥಿಗೆ ನನಗೆ ಗೊತ್ತಿಲ್ಲದೆ ಮಾತನಾಡಿದ್ದೇನೆ ಎಂಬ ಒಂದು ಆರೋಪವನ್ನು ಮಾಡಿದ್ದಾರೆ. ಎರಡನೆಯದು ಅಲ್ಲಿ 20-30 ವರ್ಷಗಳಿಂದ ಮೆರವಣಿಗೆ ಹೋಗದೆ ಇರತಕ್ಕಂಥ ಒಂದು ಜಾಗದಲ್ಲಿ ಮೆರವಣಿಗೆ ಹೋಗಿದ್ದಾರೆ ಎಂದು ನಾನು ಹೇಳಿದ್ದಕ್ಕೆ ಎಲ್ಲಿ ಹೋಗುತ್ತಾ ಇದ್ದರು ಎಂದು ಹೇಳಿದ್ದಾರೆ. ಈ ಎರಡೂ ವಿಷಯಗಳ ಬಗ್ಗೆ ನಾನು ಉತ್ತರ ಹೇಳಿ ಮುಗಿಸುತ್ತೇನೆ. ವಾಸ್ತವಾಂಶ ಅಂದರೆ ಇಪ್ಪತ್ತು ವರ್ಷಗಳಿಂದ ಮೆರವಣಿಗೆ ಹೋಗದೇ ಇರತಕ್ಕಂಥ ಒಂದು ಓಣಿಯಲ್ಲಿ ಮೆರವಣಿಗೆ ಹೋಗಿದ್ದಾರೆ ಅಂಥಕಂಥದ್ದು ವಾಸ್ತವ ಅಲ್ಲ ಎಂದು ಹೇಳಿ ಅಧಿಕಾರಿಯುತವಾಗಿ ಏನಾದರೂ ಅದು ತೀರ್ಮಾನವಾದರೆ ನಾನು ಖಂಡಿತ ಈ ಸದನಕ್ಕೆ ತಪ್ಪು ಒಪ್ಪಿಗೆ ಕೊಡಲಿಕ್ಕೆ ತಯಾರಿಲ್ಲ, ಅದರ ಬಗ್ಗೆ ಯಾರೂ ಭಿನ್ನಾಭಿಪ್ರಾಯ ಪಡತಕ್ಕಂಥ ಅವಶ್ಯಕತೆ ಇಲ್ಲ. ಎರಡನೆಯದು, ಎಲ್ಲರೂ ಎಲ್ಲಾ ಕಡೆ ಮೆರವಣಿಗೆ ಹೋಗಬಹುದು, ಹಾಗಾಗಿ ವಿಧಾನಸೌಧದ ಸುತ್ತಲೂ ಈಗ ಏಕೆ 144 ಸೆಕ್ಷನ್ ಹಾಕಿದ್ದಾರೆ, ನಾವೆಲ್ಲಾ ಇಲ್ಲೆ ಕುಳಿತಿದ್ದೇವೆ, ಇಲ್ಲೆಲ್ಲಾ ಜನರು ಓಡಾಡಬಾರದೇನು ? ಏಕೆ ಹಾಕಿದ್ದೇವೆ, ಕೆಲವು ನಿಯಮಗಳಿವೆ, ಕೆಲವು ಸಂದರ್ಭಗಳಲ್ಲಿ ಕೆಲವು ನಿಯಮಗಳಿರುತ್ತವೆ. ಅದನ್ನು ಪಾಲಿಸಬೇಕಾಗುತ್ತದೆ, ನಾವೆಲ್ಲರೂ ಶಾಸನ ಸಭೆಯಲ್ಲಿ ಕುಳಿತಿರತಕ್ಕಂಥ ಸದಸ್ಯರು ನಮ್ಮನ್ನು ಆರಿಸಿ

ಕಳುಹಿಸಿರತಕ್ಕಂಥ ಜನರನ್ನು ಒಳಗಡೆ ಬಿಡುವುದಿಲ್ಲ; ಏಕೆ ಹಾಗೆ? ಅದಕ್ಕೆ ನಿಯಮ ಇಲ್ಲವೇನು ? ಅದಕ್ಕೋಸ್ಕರ ಕೆಲವು ಸಂದರ್ಭಗಳಲ್ಲಿ, ಕೆಲವು ಪ್ರದೇಶಗಳಲ್ಲಿ ಮೆರವಣಿಗೆ ಮಾಡತಕ್ಕಂಥದನ್ನು, ಸಭೆ ಮಾಡತಕ್ಕಂಥದನ್ನು ನಿಷೇಧ ಮಾಡತಕ್ಕಂಥದ್ದು ಈ ವ್ಯವಸ್ಥೆಯಲ್ಲಿರತಕ್ಕಂಥ ಒಂದು ಭಾಗ. ಅದಕ್ಕೆ ನಾನು ಒಪ್ಪುತ್ತೇನೆ ಎಂದು ಅಲ್ಲ. ಅದಕ್ಕೆ ವೈಯಕ್ತಿಕವಾಗಿ ನನ್ನ ವಿರೋಧ ಇದೆ. ಆದರೆ ಈ ವ್ಯವಸ್ಥೆಯನ್ನು ಒಪ್ಪಿಕೊಂಡಿರತಕ್ಕಂಥ ನಾವು ಕೆಲವು ನಿಯಮಗಳಿಗೆ ಕೆಲವು ಸಂದರ್ಭಗಳಲ್ಲಿ, ಕೆಲವು ವಿಶೇಷಾವಾದಂಥ ಪರಿಸ್ಥಿತಿಗಳಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಈಗ ಹುಬ್ಬಳ್ಳಿಯ ಘಟನೆಯನ್ನು ತೆಗೆದುಕೊಳ್ಳಿ, 3-4 ವರ್ಷಗಳಿಂದ ಸತತವಾಗಿ ಅಲ್ಲಿ ಒಂದು ಪ್ರಕ್ಷುಬ್ಧ ವಾತಾವರಣ ಉಂಟಾಗಿದೆ. ಒಂದು ತಿಂಗಳ ಹಿಂದೆ ಸರ್ಕಾರ ಮತ್ತು ಎಲ್ಲರ ಪ್ರಯತ್ನದಿಂದಾಗಿ ಅಲ್ಲಿ ಶಾಂತಿ ನೆಲೆಸಿದೆ. ಅದು ಎಲ್ಲರಿಗೂ ನೆಮ್ಮದಿಯನ್ನು ತಂದಂಥ ವಿಷಯ. ಅದಕ್ಕೆ ಎಲ್ಲರ ಸಹಕಾರ ಇದೆ, ಆ ನೆಮ್ಮದಿಯನ್ನು ಸಹಿಸದೇ ಇರತಕ್ಕಂಥ ಜನ ಇವತ್ತು ಅಲ್ಲಿ ಪ್ರೇರೇಪಣೆ ಮಾಡಿ ಆ ನೆಮ್ಮದಿಯನ್ನು ಕೆಡಸಲಿಕ್ಕೆ ಪ್ರಯತ್ನ ಮಾಡಿರತಕ್ಕಂಥದ್ದು ವಾಸ್ತವಿಕವಾಗಿರತಕ್ಕಂಥ ಅಂಶ. ನಾನು ವಾಸ್ತವ ಅಂಶಗಳನ್ನು ತಿಳಿಯದೆ ಬೇಜವಾಬ್ದಾರಿಯಿಂದ ಖಂಡಿತ ನಾನು ಮಾತನಾಡುತ್ತಿಲ್ಲ. ಇದರಲ್ಲಿ ಗೃಹ ಸಚಿವರು ವರದಿಯನ್ನು ಓದಿರತಕ್ಕದ್ದನ್ನು ನಾವು ನೀವೆಲ್ಲರೂ ಒಪ್ಪಲೇಬೇಕೆಂದು ಏನೂ ಇಲ್ಲ. ಒಂದು ಸರ್ಕಾರ ಕಡೆಯಿಂದ, ಅಧಿಕಾರಿಗಳ ಕಡೆಯಿಂದ ಆಗಿರತಕ್ಕಂಥ ಪ್ರಥಮ ಲೋಪ ಏನು ? ಯಾವತ್ತೂ ಮೆರವಣಿಗೆ ಹೋಗದೆ ಇರತಕ್ಕಂಥ ಜಾಗಕ್ಕೆ ಮೆರವಣಿಗೆ ಹೋಗಲಿಕ್ಕೆ ಅನುಮತಿ ಕೊಟ್ಟಿರತಕ್ಕಂಥದ್ದು ತಪ್ಪು. ಅವರು ಮಾಡಿದಂಥ ತಪ್ಪನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವರು ಗೋಲಿಬಾರ್ ಮಾಡಿರಬಹುದು; ಫೈರಿಂಗ್ ಮಾಡಿರಬಹುದು, ಲಾಠಿ ಚಾರ್ಜ್ ಮಾಡಿರಬಹುದು, ಅದನ್ನು ಯಾರೂ ಸಮರ್ಥನೆ ಮಾಡುವುದಿಲ್ಲ. ಆದರೆ ಈ ಪ್ರಶ್ನೆ ಇರತಕ್ಕಂಥದ್ದು ಇವತ್ತು ನಾವೆಲ್ಲರೂ ಇಲ್ಲಿ ಕುಳಿತು ಆಲೋಚನೆ ಮಾಡಿರಬೇಕಾಗಿರತಕ್ಕಂಥ ಅಂಶ, ನಮ್ಮ ಇಡೀ ರಾಜ್ಯದಲ್ಲಿ ಆ ಸಮಸ್ಯೆಯನ್ನು ಪರಿಹಾರ ಮಾಡಿದಂಥ ಹಿನ್ನಲೆಯಲ್ಲಿ, ಅಲ್ಲಿ ಶಾಂತಿಯನ್ನು ಶಾಶ್ವತವಾಗಿ ನೆಲೆಸತಕ್ಕಂಥ ಪ್ರಯತ್ನ ಮಾಡುತ್ತೇವೆಂದು ನಾವೆಲ್ಲರೂ ಒಪ್ಪಿಕೊಂಡಿರತಕ್ಕ ಸಂದರ್ಭದಲ್ಲಿ ಇವತ್ತು ಅಲ್ಲಿ ಒಂದು ವಾತಾವರಣ ನಿರ್ಮಾಣವಾಗಿದೆ. ಆ ವಾತಾವರಣ ನಿರ್ಮಾಣವಾಗುವುದಕ್ಕೆ ಯಾರು ಕಾರಣ ? ಇವತ್ತು ಅವರು ಕಾರಣ ಅಲ್ಲ ಎಂದು ಹೇಳುವುದಾದರೆ ಅಲ್ಲಿ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಶಾಸಕರ ಮನೆಯ ಮೇಲೆ ಹಲ್ಲೆ ನಡೆದಿರತಕ್ಕಂಥದನ್ನು ಯಾರೂ ಸಮರ್ಥನೆ ಮಾಡಲಿಕ್ಕೆ ಸಾಧ್ಯವಿಲ್ಲ. ನಾನು ಕೂಡ ಸೇರಿ, ಅದು ಯಾರೇ ಆದರೂ ಕೂಡ. ಆದರೆ, ಅಂತಹ ಘಟನೆಗಳಿಗೆ ಪ್ರೇರಣೆ ನೀಡುವಂಥ ಶಕ್ತಿಗಳು, ಇವತ್ತು ಆ ಶಕ್ತಿಗಳು ಯಾರು ಎಂಬುದನ್ನು ನೀವು ಪತ್ತೆ ಹಚ್ಚುವುದರ ಬದಲು ಧರಣಿ ಕುಳಿತಿದ್ದಾರೆಂದು ನಾನು ಹೇಳಿದ್ದೇನೆ. ಧರಣಿ ಕುಳಿತುಕೊಳ್ಳತಕ್ಕಂಥದ್ದು ಅವರ ಹಕ್ಕು. ನಾನು ಬೇಡ ಎಂದು ಹೇಳುವುದಿಲ್ಲ.....

ಅಧ್ಯಕ್ಷರು :- ನಿಮ್ಮ ನಿಮ್ಮ ಸಿದ್ಧಾಂತಗಳಲ್ಲಿ ನಂಬಿಕೆ ಇಟ್ಟುಕೊಳ್ಳತಕ್ಕಂಥದ್ದು, ಸಮರ್ಥನೆ ಮಾಡಿಕೊಳ್ಳತಕ್ಕಂಥದ್ದು ಅದು ನಿಮ್ಮ ಹಕ್ಕು. ಈ ರೀತಿಯ ಬಹಳ

ಸೂಕ್ಷ್ಮವಾದಂಥ ವಿಚಾರಗಳನ್ನು ನಾವು ಇಲ್ಲಿ ಚರ್ಚೆ ಮಾಡುವಾಗ ಮತ್ತೊಮ್ಮೆ ಅದರಿಂದ ಪ್ರಚೋದನೆಗೆ ಅವಕಾಶ ಆಗತಕ್ಕಂಥ ರೀತಿಯಲ್ಲಿ ಮಾತನಾಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ನಿಮ್ಮ ಅವರ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಏನು ಇವೆ ಅದರ ಚರ್ಚೆಗೆ ಈ ಸದನ ಅವಕಾಶ ಮಾಡಿಕೊಡುವುದಿಲ್ಲ. ಆದ್ದರಿಂದ ದಯಮಾಡಿ ನಿಮ್ಮ ಅಭಿಪ್ರಾಯವನ್ನು ನೀವು ವ್ಯಕ್ತ ಮಾಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನನ್ನ ಅಭಿಪ್ರಾಯವನ್ನು ಹೇಳಿದಾಗ ನನ್ನ ಮೇಲೆ ಆರೋಪಣೆ ಮಾಡಿದ್ದಾರೆ. ವಾಸ್ತವಾಂಶ ತಿಳಿಯದೆ ಮಾತನಾಡಿದ್ದಾರೆ ಎಂದು. ಈ ಘಟನೆ ನಡೆದಿರತಕ್ಕಂಥದ್ದು ವಾಸ್ತವ ಅಲ್ಲ.

ಶ್ರೀ ಎಚ್.ಎನ್.ನಂಜೇಗೌಡ:- ವಿರೋಧ ಪಕ್ಷದ ನಾಯಕರು ಗಂಭೀರವಾದಂಥ ಒಂದು ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. 30-40 ಲಕ್ಷ ರೂಪಾಯಿಗಳ ಆಸ್ತಿ ಇವತ್ತು ಲೂಟಿಯಾಗಿದೆ. ನಾನು ಏನೂ ಮಾಡುವುದಕ್ಕೆ ಹೋಗುತ್ತಿಲ್ಲ. ನನಗೆ ಏಕೆ ಅನ್ನಿಸಿತು ಅಂದರೆ, ಮೇಲ್ಮನೆಯಲ್ಲಿ ಇರತಕ್ಕಂಥ ಇವರ ಸ್ನೇಹಿತರ ಜೊತೆಯಲ್ಲಿ ಕೆಲವರ ಹತ್ತಿರ ಮಾತನಾಡಿದ್ದೇನೆ. ಅವರ ಹೆಸರುಗಳನ್ನು ಹೇಳುವುದು ಬೇಡ. ಈಗ ರಿಕ್ಷಾ ಸುಟ್ಟರೆ ನಿಮಗೆ ವರದಿ ಬರುತ್ತದೆ, 30-40 ಲಕ್ಷ ಲೂಟಿಯಾದರೆ ವರದಿ ಬರುವುದಿಲ್ಲ, ಇದರ ಅರ್ಥ ಏನು? ನಾನು ಈ ಪಕ್ಷದ ಕೊಲಿಗ್ಸ್ ಯಾರು ಇರುತ್ತಾರೆ ಮೇಲ್ಮನೆಯಲ್ಲಿ ಅವರಲ್ಲಿ ಕೆಲವರ ಜೊತೆ ಮಾತನಾಡಿದ್ದೇನೆ. ಅಲ್ಲಿರತಕ್ಕಂಥ ಪೋಲೀಸ್ ಮುಖ್ಯಾಧಿಕಾರಿ ಆತನೇ ಪ್ರಿಜ್ಯುಡಿಷಿಯಲ್ ಆಗಿದ್ದಾನೆ ಎನ್ನತಕ್ಕಂಥ ಒಂದು ಭಾವನೆ... ಆತನು ಇದ್ದಾನೋ, ಇಲ್ಲವೋ ನನಗೆ ಗೊತ್ತಿಲ್ಲ. ಆ ವಿಷಯ ಪರಿಶೀಲನೆ ಇದರಲ್ಲಿ ಇಜ್ಜತ್ ಪ್ರಶ್ನೆ ಬೇಡ. ಆತನನ್ನು ತೆಗೆಯುವುದರಿಂದ ಅಲ್ಲಿ ವಾತಾವರಣ ಸರಿ ಆಗುವುದಾದರೆ ಯೋಚನೆ ಮಾಡಿ. ಅವನೇ ಹೊಂದಾಣಿಕೆ ಅವಕಾಶ ಕೊಡುವುದಿಲ್ಲ ಎಂಬ ಭಾವನೆ ಕೆಲವರಿಗೆ ಇದೆ. ಅದರಲ್ಲಿ ಇಜ್ಜತ್ತಿನ ಮೇಲೆ ನಿಂತುಕೊಳ್ಳುವುದು ಬೇಡ. ಏಕೆಂದರೆ ರಿಕ್ಷಾ ಸುಟ್ಟರೆ ವರದಿ ಕೊಡುತ್ತಾನೆ. 30-40 ಲಕ್ಷ ಆಸ್ತಿ ಸುಟ್ಟರೆ ವರದಿಯನ್ನು ಕೊಡುವುದಿಲ್ಲ. ಚರ್ಚೆ ವಿಚಿತ್ರವಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಸಾರ್, ನನಗೆ ಆ ವಿಷಯ ಗೊತ್ತಿರುವುದರಿಂದ ಹೇಳುತ್ತಿದ್ದೇನೆ, ಇವರೇನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರಾದ ನಂಜೇಗೌಡರು ಹೇಳಿದ್ದಾರೆ, ಈ ನೇಮಿಚಂದ್ ಎನ್ನತಕ್ಕಂಥವರ ಅಂಗಡಿಗೆ ಬೆಂಕಿ ಬಿದ್ದು 40 ಲಕ್ಷ ನಷ್ಟವಾಗಿದೆ ಎಂದು, ಅದು ನನಗೆ ಬಂದಿರತಕ್ಕ ವರದಿಗಳ ಪ್ರಕಾರವಾಗಿ, ಪೋಲೀಸರು ಕಳುಹಿಸರತಕ್ಕ ವರದಿಗಳ ಪ್ರಕಾರವಾಗಿ ಅದು ಕೋಮುಗಲಭೆಗೆ ಸಂಬಂಧಪಟ್ಟಿರತಕ್ಕಂಥದ್ದು ಅಲ್ಲ, ಬೆಂಕಿ ಆನಾಹುತದಲ್ಲಿ ಆಗಿದೆ. 21ನೇ ತಾರೀಖು ಅಲ್ಲ, 18- 18ನೇ ತಾರೀಖಿನಿಂದ ಅವರು ಅಂಗಡಿಯನ್ನೇ ಓಪನ್ ಮಾಡಿರಲಿಲ್ಲವಂತೆ. ಅವರು ಅಂಗಡಿ ಓಪನ್ ಮಾಡಿಲ್ಲ ಎಂದು ವರದಿಯಲ್ಲಿ ಹೇಳುತ್ತಾರೆ. ಈಗ ನಾವು ಯಾವ ಆಧಾರದ ಮೇಲೆ ಅವಲಂಬಿಸಿಕೊಂಡಿರಬೇಕಾಗುತ್ತದೆ ? ಪೋಲೀಸರು ಕೊಟ್ಟಿರತಕ್ಕಂಥ ವರದಿಯ

ಆಧಾರದ ಮೇಲೆ ನಾವು ಅವಲಂಬಿಸಿಕೊಂಡಿರತಕ್ಕಂಥದ್ದು. ಅವರು ಹೇಳಿರುವ ಪ್ರಕಾರವಾಗಿ it is only a fire accident, it is not connected with communual clashes.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಧ್ಯಕ್ಷರೇ, ಹಾಗಾದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಒಬ್ಬ ಜವಾಬ್ದಾರಿ ಸ್ಥಾನದಲ್ಲಿರುವಂಥ ಗೃಹ ಸಚಿವರು ಬೇರೆ ಏನು ಹೇಳುತ್ತಿದ್ದಾರೆ, ನಾನು ಹೇಳುವುದಿಲ್ಲ. ಆದರೆ ನಿಮ್ಮ ಪೋಲೀಸ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲ. ಸತ್ಯಕ್ಕೆ ಅಪಚಾರ ಮಾಡುವ ರೀತಿ ವರದಿಯನ್ನು ಕೊಡುತ್ತಿದ್ದಾರೆ. ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ ಅಧ್ಯಕ್ಷರೇ, ಹುಬ್ಬಳ್ಳಿ ಹತ್ತಿಕೊಂಡು ಉರಿಯುತ್ತಿದೆ. ಅದು ಶಾಂತವಾಗಬೇಕು, ಜನ ಗೌರವದಿಂದ ಹಾಗೂ ಶಾಂತ ರೀತಿಯಲ್ಲಿ ಜೀವನ ಮಾಡಬೇಕು. ಈಗ ಕೊಟ್ಟಿರತಕ್ಕಂಥ ವರದಿ ಸನ್ಮಾನ್ಯ ಗೃಹ ಸಚಿವರು ಹೇಳಿದ ಮೇಲೆ ನಮ್ಮ ಶಾಸಕರ ಮನೆ ಮೇಲೆ ಹಲ್ಲೆ ಆದ ಬಗ್ಗೆಯೂ ಪದೇ ಪದೇ ಪ್ರಸ್ತಾಪ ಮಾಡುವುದಕ್ಕೆ ರೆಡಿ ಇಲ್ಲ. ಆ ಅಂಗಡಿ ಬಗ್ಗೆ ಸುದ್ದಿ ಈಗ ಬಂದಿದೆ ಎಂದು ಹೇಳುತ್ತಿದ್ದಾರೆ ? ಹೇಗೆ ಬಂತು ? ಅಧ್ಯಕ್ಷರೇ, ಅದಕ್ಕೆ ನಾನು ಏನು ಸಲಹೆ ಕೊಡುತ್ತಿದ್ದೇನೆ....

ಅಧ್ಯಕ್ಷರು :- ದಯಮಾಡಿ ಒಂದು ನಿಮಿಷ ತಾವು ಹೀಲ್ಡ್ ಆಗಬೇಕು. ನಾನು ಎರಡು ಪೂರ್ಣ ಅವಧಿಯನ್ನು ಈ ಸದನದಲ್ಲಿ ಕೇಳಿದ್ದೇನೆ. ಈ ರೀತಿಯ ಘಟನೆಗಳು ಸಂಭವಿಸಿದಾಗ ನನಗೆ ತಿಳಿದ ಹಾಗೆ ಇಲ್ಲಿ ಇಷ್ಟು ಚರ್ಚೆಗೆ ತೆಗೆದುಕೊಂಡಿದ್ದುದು ನನಗೆ ನೆನಪಿಲ್ಲ. ಅಲ್ಲಿ ಇನ್ನೂ ಪೂರ್ತಿ ಶಾಂತ ಪರಿಸ್ಥಿತಿ ಮರಳಿ ಬಾರದಿರುವಾಗ ನಾವಿಲ್ಲಿ ಚರ್ಚೆ ಮಾಡುತ್ತಾ ಒಂದು ವಾದಕ್ಕೆ ಪುರಸ್ಕಾರ ಕೊಡುವುದು ಅಥವಾ ಪೋಲೀಸರನ್ನು ಹೊಗಳುವುದು, ಪೋಲೀಸರನ್ನು ತೆಗಳುವುದು, ಯಾವುದೇ ರೀತಿಯಾದಂಥ ಕೆಲಸವನ್ನು ಇಲ್ಲಿ ನಡೆಸತಕ್ಕಂಥದ್ದು, ಪರೋಕ್ಷವಾಗಿ ಅಲ್ಲಿ ಶಾಂತಿ ಮತ್ತೆ ಹಿಂತಿರುಗುವುದಕ್ಕೆ ಸಹಾಯಕ ಆಗದೆ ಹೋಗುತ್ತದೆ ಎನ್ನುವ ಭಯಕ್ಕಾಗಿ ಇಲ್ಲಿಯವರೆಗೆ ನಾವು ಒಂದು ಸಂಪ್ರಾದಾಯವನ್ನು ಏನು ಇಟ್ಟುಕೊಂಡು ಬಂದಿದ್ದೇವೆ ಅಂದರೆ ಈ ರೀತಿಯ ವಿಷಯಗಳು ಬಂದಾಗ ಕೆಲವು ಒಂದು ಜನರಲ್ ರೆಫರೆನ್ಸ್ ಮಾಡಿ ಸದನದಲ್ಲಿರತಕ್ಕ ಎಲ್ಲಾ ಜನ ಕೂಡಿ ಜನಜೀವನ ನೆಮ್ಮದಿಯಿಂದ ನಡೆದುಕೊಂಡು ಹೋಗುವ ದಿಕ್ಕಿನಲ್ಲಿ ಮಾತನಾಡಿ ಅಷ್ಟಕ್ಕೆ ನಿಲ್ಲಿಸಿ ಬಿಡಬೇಕು. ಆದರೆ ಈ ಚರ್ಚೆ ಸ್ವಲ್ಪ ದೂರ ಹೋಗುತ್ತಿದೆ. ತಮ್ಮಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ ಬಹಿರಂಗವಾಗಿ ನಾವು ಚರ್ಚೆ ಮಾಡಿ ನಮ್ಮ ನಮ್ಮ ವಾದಕ್ಕೆ ಪುಷ್ಟಿ ಕೊಡತಕ್ಕಂತಹ ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟರೆ ಆದರಿಂದ ಪರೋಕ್ಷವಾಗಿಯಾದರೂ ಅಲ್ಲಿ ಪರಿಸ್ಥಿತಿ ಹತೋಟಿ ಮೀರುವುದಾದರೆ ಒಂದಲ್ಲ ಒಂದು ರೀತಿಯಲ್ಲಿ ಇಡೀ ಸದನ ಜನರ ದೃಷ್ಟಿಯಲ್ಲಿ ತಪ್ಪು ಮಾಡಿದಂತಾಗುತ್ತದೆ ಎಂಬುದನ್ನು ತಾವುಗಳು ದಯಮಾಡಿ ಆಲೋಚನೆ ಮಾಡಿ. ಈ ದಿಸೆಯಲ್ಲಿ ತಾವು ಏನಾದರೂ ಗಂಭೀರವಾದ ಸಲಹೆಗಳನ್ನು ಕೊಡುವುದಾದರೆ ಕೊಡಿ. ಜನರ ಆಸ್ತಿ ಪಾಸ್ತಿಗಳಿಗೆ, ಜನರ ಪ್ರಾಣಕ್ಕೆ, ಜನರ ಮಾನಕ್ಕೆ

ಎಲ್ಲದಕ್ಕೂ ರಕ್ಷಣೆ ಕೊಡತಕ್ಕ ಒಂದು ಜವಾಬ್ದಾರಿ ಇಡೀ ಸರ್ಕಾರದ ಮೇಲಷ್ಟೆ ಅಲ್ಲ, ನಮ್ಮ ನಿಮ್ಮೆಲ್ಲರ ಮೇಲೆಯೂ ಇದೆ. ತಮಗೆ ಬೇಕಾಗಿದ್ದರೆ ಖಾಸಗಿಯಾಗಿ ನನ್ನ ಕೋಣೆಯಲ್ಲಿ ಕುಳಿತುಕೊಂಡು ಚರ್ಚಿಸೋಣ. ಚರ್ಚೆಗೆ ಸಭಾ ನಾಯಕರು, ಗೃಹ ಮಂತ್ರಿಗಳು ಎಲ್ಲರನ್ನೂ ಕರೆಯಿಸೋಣ. ಈ ರೀತಿಯ ವಿಷಯ ಬಂದಾಗ ಹೇಗೆ ಚರ್ಚಿಸಬೇಕು ಎಂಬ ಬಗ್ಗೆ ತಾವು ಬೇಕಾದರೆ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿಯವರನ್ನು ಕೇಳಬಹುದು. ತಾವೂ ಕೂಡ ಸದನಕ್ಕೆ ಹಳಬರಾಗಿದ್ದೀರಿ. ಮಾನ್ಯ ನಂಜೇಗೌಡರು ಕೂಡ ಹಳಬರಾಗಿದ್ದಾರೆ. ಸಭಾನಾಯಕರು ಕೂಡ ಬಹಳ ವರ್ಷಗಳಿಂದ ಇಲ್ಲಿ ಕಾರ್ಯನಿರ್ವಹಿಸಿದ್ದಾರೆ. ದಯಮಾಡಿ ಚರ್ಚೆ ಮಾಡಬೇಕಾದರೆ ತಾವೆಲ್ಲಾ ಯೋಚನೆ ಮಾಡಿ. ಅನೇಕ ಸಂದರ್ಭಗಳಲ್ಲಿ ಈ ತರಹದ ಘಟನೆಗಳಾಗಿವೆ. ಈ ರೀತಿಯ ಘಟನೆಗಳು ಬಂದಾಗ ಇಷ್ಟು ವಿಸ್ತಾರವಾಗಿ ಚರ್ಚೆ ನಡೆದದ್ದು ನನಗಂತೂ ನೆನಪು ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸರ್ಕಾರದವರು ಸ್ಟೇಟ್‌ಮೆಂಟ್ ಕೊಟ್ಟ ಮೇಲೆ ಕೆಲವು ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ. ಉದಾಹರಣೆಗೆ ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಒಂದು ಕ್ಲಾರಿಫಿಕೇಷನ್ ಕೇಳಿದರು. ಅದಕ್ಕಿಂತ ಮುಂಚೆ ಸನ್ಮಾನ್ಯ ಮುಖ್ಯ ಮಂತ್ರಿಗಳು ನನ್ನ ನಿಲುವಳಿ ಸೂಚನಕ್ಕೆ ಉತ್ತರ ಕೊಡುತ್ತಾ ಹೇಳಿದರು, '1969ರಿಂದ ಇಲ್ಲಿಯವರೆಗೆ ಅಂದರೆ ಕಳೆದ 26 ವರ್ಷಗಳಿಂದಲೂ ಮುಲ್ಲಾರ್ ಓಣಿಯಿಂದ ಹೋಳಿ ಹಬ್ಬದ ಮೆರವಣಿಗೆ ಹೋಗಿದ್ದಿಲ್ಲ. ಈಗ ಪುನ: ಮೆರವಣಿಗೆ ಹೋಗಲು ಅನುಮತಿ ಕೊಟ್ಟಿದ್ದರಿಂದ ಈ ಘಟನೆ ನಡೆಯಿತು ಎಂಬುದು ನಿಜವೋ ಸುಳ್ಳೋ ಎಂಬ ಸ್ಪಷ್ಟೀಕರಣವನ್ನು ಮಾನ್ಯ ಸದಸ್ಯರು ಕೇಳಿದರು. ಅದರ ಬಗ್ಗೆ ಸರ್ಕಾರದವರಿಂದ ಏನು ಉತ್ತರ ಬರಲಿಲ್ಲ. ಇದು ವಾತಾವರಣ ಕೆಡಿಸತಕ್ಕಂಥದ್ದೇನಲ್ಲ. ನಮಗೆ ಬಂದಂತಹ ಮಾಹಿತಿ ಪ್ರಕಾರ ಮತ್ತು ಅಲ್ಲಿನ ಅನೇಕ ಮುಖಂಡರುಗಳು ಹೇಳಿದಂಥ ಮಾಹಿತಿ ಪ್ರಕಾರ ಈ ಓಣಿಯಿಂದ ಕಳೆದ 26 ವರ್ಷಗಳಿಂದಲೂ ಹೋಳಿ ಮೆರವಣಿಗೆ ಒಯ್ದಿಲ್ಲ. ಈ ಸಲ ಅನಾವಶ್ಯಕವಾಗಿ ಆ ರೂಟಿನಲ್ಲಿ ಮೆರವಣಿಗೆ ಹೋದ ಕಾರಣ ಇಂತಹ ಘಟನೆ ನಡೆದಿದೆ. ಪೋಲೀಸರು ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕಾಗಿತ್ತು.

MR. SPEAKER:- This is exactly what I am telling. ಎಲ್ಲಿ ಮೆರವಣಿಗೆ ಹೋಗಬಾರದಿತ್ತೋ ಅಲ್ಲಿ ಹೋಗಿದೆ ಎನ್ನುವ ಅಭಿಪ್ರಾಯ ತಮ್ಮದು. ಒಂದು ರಿಕ್ಷಾ ಸುಟ್ಟು ಹೋದರೆ ವರದಿ ಬರುತ್ತದೆ. ಒಬ್ಬ ಶಾಸಕನ ಮನೆ ಮೇಲೆ ಹಲ್ಲೆ ನಡೆದರೆ ವರದಿ ಬರುವುದಿಲ್ಲವೇ ಎನ್ನು ಅಭಿಪ್ರಾಯ ಮತ್ತೊಂದು. This itself is lenough to gain cause provocation. You were the Minister; and also in the Establishment.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪೋಲೀಸರಿಂದ ವರದಿ ಬರದೇ ಇರಬಹುದು. ವರದಿ ಪೇಪರ್‌ನಲ್ಲಿ ಬರುತ್ತದೆ, ಟೆಲಿಫೋನ್‌ನಲ್ಲಿ

ತಿಳಿದುಕೊಳ್ಳಬಹುದು. ತಮಗೂ ವಿಷಯ ತಿಳಿಸುವವರಿದ್ದಾರೆ. 50-60 ಲಕ್ಷ ರೂಪಾಯಿಗಳ ಪ್ರಾಪರ್ಟಿ ಆ ರಯಟ್‌ನಲ್ಲಿ ಸುಟ್ಟು ಹೋದರೆ, ಪೋಲೀಸರು ವರದಿ ಕೊಡದೇ ಹೋದರೂ ಕೂಡ ಬೇರೆ ರೀತಿ ತಿಳಿದುಕೊಳ್ಳಬಹುದು. ಜರ್ನಲಿಸ್ಟ್ ಇರುತ್ತಾರೆ, ಟೆಲಿಫೋನ್ ಇರುತ್ತದೆ, ರಿಲೇಟಿವ್ಸ್ ಇರುತ್ತಾರೆ. ಬೇರೆ ಪಾರ್ಟಿಯವರು ಇರುತ್ತಾರೆ. ಯಾರಿಂದಲೂ ಮಾಹಿತಿ ಪಡೆದುಕೊಳ್ಳಬಹುದು. ಇದು ಕೇವಲ ಒಬ್ಬರು ಇಬ್ಬರಿಂದ ವರದಿ ಪಡೆಯತಕ್ಕ ಪ್ರಶ್ನೆಯಲ್ಲ.

ಅಧ್ಯಕ್ಷರು :- ತಮಗೂ ಗೊತ್ತಿದೆ. ಪತ್ರಿಕೆಗಳಲ್ಲಿ ಕೂಡ ಈ ತರಹದ ಘಟನೆಗಳು ನಡೆದಾಗ ಪೂರ್ಣ ಪ್ರಚಾರ ಮಾಡಲು ಹೋಗುವುದಿಲ್ಲ. ಶಾಂತಿಗೆ ಭಂಗ ಬರತಕ್ಕಾಂಥದ್ದು ಎನಿಸಿದ್ದರೂ ಕೂಡ ಪತ್ರಿಕೆಯವರು ಅದನ್ನು ಎಡಿಟ್ ಮಾಡಿ ವರದಿ ಕೊಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :- ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ಒಂದು ಸೂಚನೆಯನ್ನು ಸರ್ಕಾರ ಮರು ಮಾತನಾಡದೆ ಒಪ್ಪಿಕೊಂಡಿದೆ. ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರನ್ನು ವಿಚಾರಣೆಗೆ ನೇಮಕ ಮಾಡಬೇಕೆಂದು ಅವರೇನೂ ಕೇಳಲಿಲ್ಲ. ಆದರೂ ನಾವೇ ಒಂದು ನಿರ್ಣಯ ತೆಗೆದುಕೊಂಡು ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರಿಂದ ನ್ಯಾಯಾಂಗ ವಿಚಾರಣೆ ಮಾಡಿಸಲು ನಿರ್ಧರಿಸಿ, ಈಗಾಗಲೇ ನ್ಯಾಯಧೀಶರೊಬ್ಬರ ಹೆಸರನ್ನು ಇದಕ್ಕಾಗಿ ಸೂಚಿಸುವಂತೆ ನ್ಯಾಯಾಲಯಕ್ಕೆ ಪತ್ರ ಬರೆದಿದ್ದೇನೆ. ಇದರ ಬಗ್ಗೆ ಇನ್ನೂ ಎಷ್ಟು ಚರ್ಚೆ ಆಗಬೇಕೋ ನನಗಂತೂ ಅರ್ಥವಾಗುವುದಿಲ್ಲ. ಅಲ್ಲಿ ಯಾರೋ ಒಬ್ಬ ಅಧಿಕಾರಿ ಅವನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿಲ್ಲವೆಂದು ಅವರು ಹೇಳಿದರು. ಅವರ ದೃಷ್ಟಿಯಲ್ಲಿ ಆ ಅಧಿಕಾರಿ ಸರಿಯಾಗಿ ಕರ್ತವ್ಯ ನಿರ್ವಹಣೆ ಮಾಡದೇ ಇರಬಹುದು. ಅಲ್ಲಿ ಕೇವಲ ಒಬ್ಬ ಅಧಿಕಾರ ಮಾತ್ರ ಇಲ್ಲ. ಒಬ್ಬ ಅಡಿಷನಲ್ ಡಿ. ಜಿ. ಪಿ. ಇಲ್ಲಿಂದ ಹುಬ್ಬಳ್ಳಿಗೆ ಹೋಗಿದ್ದಾರೆ. ಅಲ್ಲದೇ ನಾಲ್ಕು ಜಿಲ್ಲೆಗಳಿಂದ ಸೀನಿಯರ್‌ಮೋಸ್ಟ್ ಎಸ್. ಪಿ. ಗಳನ್ನು ಅಲ್ಲಿನ ನಾಲ್ಕು ಪೋಲೀಸ್ ಸ್ಟೇಷನ್‌ಗಳಲ್ಲಿ ಹಾಕಿದ್ದೇವೆ. ಯಾರೋ ಒಬ್ಬ ಅಧಿಕಾರಿ ಮೇಲೆ ನಾವು ಅವಲಂಬನೆ ಆಗಿಲ್ಲ. ಬಿಜಾಪುರ, ಬೆಳಗಾವಿ, ನಾರ್ತ್ ಕೆನರಾದಿಂದ ನಾಲ್ಕು ಜನ ಹಿರಿಯ ಅಧಿಕಾರಿಗಳನ್ನು ವಿಶೇಷವಾಗಿ ಅಲ್ಲಿಟ್ಟಿದ್ದೇವೆ. ಅಡಿಷನಲ್ ಡಿ. ಜಿ. ಪಿ. ಯೂ ಅಲ್ಲಿದ್ದಾರೆ. ಸರ್ಕಾರಕ್ಕೆ ವರದಿ ಮಾಡುವಾಗ ಯಾರೋ ಒಬ್ಬ ಅಧಿಕಾರಿ ಅವರ ದೃಷ್ಟಿಕೋನದಲ್ಲಿ ಸರಿಯಾಗಿಲ್ಲ ಎಂಬ ಭಾವನೆ ಇಟ್ಟುಕೊಂಡು ಮಾತನಾಡಿರತಕ್ಕಾಂಥದ್ದು ಉಚಿತವೇ ಎಂಬ ತೀರ್ಮಾನವನ್ನು ಸದನಕ್ಕೆ ಬಿಡುತ್ತೇನೆ. ನೀವು ಒಂದು ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅವರು ಯಾರೋ ಒಬ್ಬರ ಹೆಸರನ್ನು ಹೇಳಿ ಮಾತನಾಡಿದರು. ಈ ಸದನದಲ್ಲಿ ಅವರ ಹೆಸರನ್ನು ಪ್ರಸ್ತಾಪ ಮಾಡದೇ ಇರುವಂತಹವರು ಇದ್ದಾರೆ. ಯಾವುದೋ ಒಂದು ವರ್ಗಕ್ಕೆ ಸೇರಿದವರಿಗೆ ನಷ್ಟ ಆಗಿಲ್ಲ. ಇಲ್ಲಿ ಇಡೀ ಸದನ ಕುಳಿತಿರುವುದೇ ಜನರ ರಕ್ಷಣೆ ಮಾಡಲಿಕ್ಕೆ. ಅವರು ಹೇಳಿದರು, ಯಾರೋ ಒಬ್ಬನ ಆಸ್ತಿಗೆ ಲುಕ್ಸಾನು ಆಗಿದೆ. ಇದರ ಬಗ್ಗೆ ಇಲ್ಲಿ

ಚರ್ಚೆಯಾಗಿದೆ. ಹಾಗಾದರೆ ಬಾಕಿಯವರಿಗೆ ಏನು ಲುಕ್ಸಾನು ಆಗಿಲ್ಲವೇ ? ಬಾಕಿ ಸಮಾಜದವರಿಗೆ ಏನು ಲುಕ್ಸಾನು ಆಗಿಲ್ಲವೇ ? ಬಾಕಿ ವರ್ಗದವರಿಗೆ ಏನು ಲುಕ್ಸಾನು ಆಗಿಲ್ಲವೆ ? ಸರ್ಕಾರ ಕೈಕಟ್ಟಿ ಕುಳಿತುಕೊಳ್ಳುವುದಕ್ಕಲ್ಲ ಇರುವುದು. ನಮಗೂ ಜವಾಬ್ದಾರಿ ಇದೆ. ಸರ್ಕಾರ ಯಾವ ರಸ್ತೆಯಲ್ಲಿ ಹೋಗಬೇಕು, ಯಾವ ರಸ್ತೆಯಲ್ಲಿ ಹೋಗಬಾರದು ಎನ್ನುವ ನಿರ್ಣಯವನ್ನು ಅವರು ಮುಂದೆ ಅಧಿಕಾರಕ್ಕೆ ಬಂದಾಗ ಮಾಡಲಿ. ಸರ್ಕಾರಕ್ಕೆ ಮುಂದೇನು ಮಾಡಬೇಕೆಂಬುದನ್ನು ತೀರ್ಮಾನವನ್ನು ಮಾಡತಕ್ಕದ್ದು ಗೊತ್ತಿದೆ. ಒಂದು ಮಾತನ್ನು ನಾನು ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ. ಇದರೊಳಗೆ ಯಾವುದೋ ಒಂದು ಕಾರಣದಿಂದ ಇಂತಹ ಒಂದು ಸನ್ನಿವೇಶಕ್ಕೆ ಈ ರಾಜ್ಯದಲ್ಲಿ ಅವಕಾಶ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ನಾನು ನ್ಯಾಯಾಂಗ ವಿಚಾರಣೆಯ ಟರ್ಮ್ಸ್ ಅಂಡ್ ರೆಫರೆನ್ಸಸ್ ಓದುತ್ತೇನೆ ದಯಮಾಡಿ ಕೇಳಿ. ಮಾನ್ಯ ಮುಖ್ಯ ಮಂತ್ರಿಗಳಾಗಿದ್ದಂತಹವರು ನೀವು. ನನ್ನಲ್ಲಿ ಏನಾದರೂ ದೋಷ ಇದ್ದಲ್ಲಿ ತಿದ್ದಿಕೊಳ್ಳಲಿಕ್ಕೆ ನಾನು ತಯಾರಿದ್ದೇನೆ. ನ್ಯಾಯಾಂಗ ವಿಚಾರಣೆಯ ಟರ್ಮ್ಸ್ ಅಂಡ್ ರೆಫರೆನ್ಸಸ್ ಹಾಕುವಾಗ ಸರ್ಕಾರ ಯಾವುದೇ ಮುಚ್ಚುಮರೆ ಮಾಡಿಲ್ಲ. ಅದನ್ನು ದಯಮಾಡಿ ಸದನಕ್ಕೆ ಓದಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸದನ ಬಿಟ್ಟು ನಾವು ಮಾಡಬೇಕಾಗಿರುವುದು ಏನೂ ಇಲ್ಲ. ನ್ಯಾಯಾಂಗ ವಿಚಾರಣೆಯ ಟರ್ಮ್ಸ್ ಅಂಡ್ ರೆಫರೆನ್ಸ್ ಈ ರೀತಿ ಇದೆ.

1. ಹುಬ್ಬಳ್ಳಿಯಲ್ಲಿ ದಿನಾಂಕ 21.3.1995ರಂದು ನಡೆದ ಘಟನೆ ಹಾಗೂ ಪೋಲೀಸ್ ಗೋಲಿಬಾರ್‌ನಿಂದ ನಾಲ್ಕು ಜನ ಸಾವಿಗೀಡಾದ ಹಾಗೂ 24 ಜನ ಗಾಯಗೊಂಡ ಘಟನೆಗಳ ಬಗ್ಗೆ ವಿಚಾರಣೆ ನಡೆಸುವುದು.

2. ಈ ಘಟನೆ ಪೂರ್ವ ನಿಯೋಜಿತ ಘಟನೆ ಆಗಿತ್ತೇ ?

3. ಈ ಘಟನೆಯನ್ನು ನಿಯಂತ್ರಿಸುವಲ್ಲಿ ಪೋಲೀಸರು ಯಾವುದೇ ನಿರ್ಲಕ್ಷ್ಯ ತೋರಿಸಿದ್ದಾರೆಯೇ ?

ಇದಕ್ಕಿಂತ ಬೇರೆ ಏನು ಬೇಕು ನಿಮಗೆ ? ನೀವು ಕೂಡ ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಿದ್ದವರು. Have they failed in their responsibilities ಎಂಬುದನ್ನೂ ಕೂಡ ಟರ್ಮ್ಸ್ ಅಂಡ್ ರೆಫರೆನ್ಸಸ್‌ನಲ್ಲಿ ಹಾಕಿದ ಮೇಲೆ ಇದಕ್ಕಿಂತ ಏನು ಬೇಕಾಗುತ್ತದೆಯೋ ನನಗೆ ಅರ್ಥವಾಗುವುದಿಲ್ಲ. ಮೂರು ದಿನಗಳಾದರೂ ಇನ್ನೂ ಬಡ್ಜೆಟ್ ಡಿಸ್ಕಷನ್ ಶುರು ಆಗಿಲ್ಲ. ಇಷ್ಟಾದರೂ ಅಲ್ಲಿಗೆ ಸದನ ಸಮಿತಿ ಕಳುಹಿಸಬೇಕೆಂದರೆ ಹೇಗೆ ? Is the Government incompetent to handle that ? ಏನಾದರೂ ಒಂದು ಹಂತದವರೆಗೂ ನಾವು ಅದನ್ನು ಸಹಿಸಿಕೊಳ್ಳಬಹುದು. ಈ ಸರ್ಕಾರಕ್ಕೆ ಸಹನೆ ಇಲ್ಲ. ಶಕ್ತಿ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಸದನ ಸಮಿತಿಯನ್ನು ಸ್ಥಳಕ್ಕೆ ಕಳುಹಿಸಿಕೊಡಿ ಎಂದು ಹೇಳಿದ್ದಾರೆ. ತಾವೂ ಕೂಡ ಸರ್ಕಾರ ನಡೆಸಿದ್ದೀರಿ ? ಇದರ ಬಗ್ಗೆ ಸದನ ಸಮಿತಿ ಕಳುಹಿಸಲು ಸಾಧ್ಯವಾಗುತ್ತದೆಯೇ ? ಟರ್ಮ್ಸ್ ಅಂಡ್ ರೆಫರೆನ್ಸಸ್ ಅನ್ನು ಮುಂದೆ

ಓದುತ್ತೇನೆ :-ಘಟನೆ ನಡೆದ ಸಂದರ್ಭದಲ್ಲಿ ಪೋಲೀಸ್ ಬಲದ ಪ್ರಮಾಣದ ಅವಶ್ಯಕತೆ ನ್ಯಾಯ ಸಮ್ಮತವಾಗಿತ್ತೇ ? ಅಥವಾ ಅಧಿಕವಾಗಿತ್ತೇ ? ಇನ್ನು ಏನು ಟರ್ಮ್ಸ್ ಅಂಡ್ ರೆಫರೆನ್ಸಸ್ ಹಾಕಬೇಕೋ ಗೊತ್ತಾಗುತ್ತಿಲ್ಲ. ತಾವೂ ಸರ್ಕಾರ ನಡೆಸಿದ್ದೀರಿ ? ಸದರಿ ಘಟನೆಗೆ ಸಂಬಂಧಪಡಬಹುದಾದ ಅಥವಾ ಸಂಬಂಧಪಟ್ಟ ಯಾವುದೇ ಕೃತ್ಯ ಲೋಪ ಅಥವಾ ವ್ಯವಹರಣೆಯಿಂದ ಉದ್ಭವಿಸಬಹುದಾದ ಅಥವಾ ಅದಕ್ಕೆ ಸಂಬಂಧಿಸಿದ ಪ್ರಾಸಂಗಿಕವಾದ ಯಾವುದೇ ಇತರ ವಿಷಯವನ್ನು ಪರಿಶೀಲಿಸುವುದು. ಇಷ್ಟೆಲ್ಲಾ ನಾವು ಸದನದಲ್ಲಿ ಹೇಳಿದ ಮೇಲೆ ಇನ್ನೂ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಪುನ: ಹೇಳುತ್ತೇನೆ. ಈಗಾಗಲೇ ಈ ಘಟನೆ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಲು ನ್ಯಾಯಾಧೀಶರೊಬ್ಬರ ಹೆಸರನ್ನು ಸೂಚಿಸುವಂತೆ ಹೈಕೋರ್ಟಿಗೆ ಪತ್ರ ಬರೆಯಲಾಗಿದೆ. ಪೋಲೀಸರಿಂದ ಕರ್ತವ್ಯ ಲೋಪ ಆಗಿದೆಯೇ ಎನ್ನುವುದನ್ನೂ ಸದರಿ ನ್ಯಾಯಾಂಗ ವಿಚಾರಣೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಯಾರೋ ಒಬ್ಬ ನೇಮಿಚಂದ್ರನ ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ಅವರು ಹೇಳುತ್ತಾರೆ. ಏನು ನೇಮಿಚಂದ್ರನೊಬ್ಬನದೇ ಏನು ಆಸ್ತಿ ಹೋಗಿರುವುದು. ಒಬ್ಬರ ಹೆಸರನ್ನು ಪ್ರಸ್ತಾಪಿಸಿ ನಾವು ಮಾತನಾಡಬಹುದು. ಆದರೆ ಏಕೆ ಹೇಳಲಿಲ್ಲ. ಎಷ್ಟೋ ಜನ ಯಾವ ಯಾವ ವರ್ಗಕ್ಕೆ ಸೇರಿದ್ದಾರೆ, ಯಾವ ಯಾವ ಧರ್ಮಕ್ಕೆ ಸೇರಿರುತ್ತಾರೆ. ಅದು ಪ್ರಚೋದನೆ ಆಗಬಾರದು. ಅಲ್ಲಿ ಏನು ಘಟನೆ ನಡೆಯುತ್ತಿದೆ ಎಂಬುದು ನಮಗೆ ಗೊತ್ತಿದೆ ಎನ್ನುವುದರ ಆಧಾರದ ಮೇಲೆಯೆ ನಾವು ಯಾವುದೇ ವರ್ಗದ ಬಗ್ಗೆ ಯಾವುದೇ ಧರ್ಮದ ಬಗ್ಗೆ ಹೆಸರು ಹೇಳಿ ಮಾತನಾಡಲಿಲ್ಲ. ನನಗೆ ಗೊತ್ತಿದ್ದರೂ ನಾನು ಈ ಸನದನಲ್ಲಿ ಅವರ ಹೆಸರು ಹೇಳಲಿಲ್ಲ. ಆಗ ಸದನದಲ್ಲಿ ತಾವೂ ಇದ್ದೀರಿ. ನಾನು ಯಾವ ಕಡೆ, ಯಾವ ವರ್ಗ, ಯಾವ ಧರ್ಮ, ಯಾವ ಗುಂಪಿನವರಿಗೆ ಸೇರಿದವರು ಎಂದು ಹೇಳಲಿಲ್ಲ. ಇದು ಹೇಗಾಯಿತು ಎಂಬುದರ ಬಗ್ಗೆ ನನಗೆ ಸ್ವಲ್ಪ ಅರುವು ಇದೆ. ಆದರೆ ಅದನ್ನು ಹೇಳುವುದರಿಂದ ಮತ್ತಷ್ಟು ಪ್ರಚೋದನೆ ಆಗಬಾರದು ಎನ್ನುವ ಕಾರಣದಿಂದ ನಾವು ಹಲವು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಲ್ಲ. ಇದಕ್ಕಿಂತ ಬೇರೆ ಏನೂ ಹೇಳಲಿಕ್ಕೆ ನನಗೆ ಸಾಧ್ಯವಿಲ್ಲ. ಸದನ ಸಮಿತಿಯನ್ನು ಕಳುಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಅವರ ಮನಸ್ಸಿನಲ್ಲಿ ಅಸಮಾಧಾನ ಇರಬಹುದು. ಹೊರಗಡೆ ಅವರ ಶಾಸಕರಿಗೆ ಪೋಲೀಸ್ ಎಸಾಕರ್ಟ್ ಕೊಟ್ಟಿದ್ದೇವೆ. ಎಲ್ಲಾ ಕಡೆ ಅವರು ನೋಡಲಿಕ್ಕೆ ಹೋದಾಗ ಅಲ್ಲಿ ಏನಾದರೂ ಅಪಾಯ ಆದೀತು ಎಂದು ಭಾವಿಸಿ ಅವರ ಜೊತೆಗೆ ಪೋಲೀಸ್ ಎಸ್ಕಾರ್ಟ್ ಕಳುಹಿಸಿಕೊಟ್ಟಿದ್ದೇವೆ. ಇದಕ್ಕಿಂತ ಇನ್ನೇನು ನಾವು ಮಾಡುವುದಕ್ಕೂ ಗೊತ್ತಾಗುವುದಿಲ್ಲ. ಒಂದು ಮಾತನ್ನು ಹೇಳುತ್ತೇನೆ. ಇಂತಹ ಸನ್ನಿವೇಶದಲ್ಲಿ ಹೊರಗಡೆ ಯಾವುದೇ ವ್ಯಕ್ತಿ ಇಂತಹ ಪ್ರಚೋದನೆಗೆ ಅತಿರೇಕಕ್ಕೆ ಕಾರಣವಾಗುವುದಾದರೆ ಈ ಸದನದ ಸ್ಥಾನಮಾನ ಅದಕ್ಕೆ ಅಡ್ಡಿ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಸದನದ ಸ್ಥಾನಮಾನದ ಹೆಸರಿನಲ್ಲಿ ಈ ರಾಜ್ಯದ ಇಂತಹ ಶಾಂತಿಯನ್ನು ಕಲಕತಕ್ಕಂತಹ ಯಾವುದೇ ಗುಂಪಿರಲಿ ಅದಕ್ಕೂ ನಮಗೂ ಸಂಬಂಧ ಇಲ್ಲ. If need be, the Government has to take certain stringent action.

ಶ್ರೀ ಬಿ.ಎಸ್.ಯಡಿಯೂರಪ್ಪ :- ತಾವು ದಾಖಲೆಯನ್ನು ತೆಗೆಸಿ ನೋಡಿ. ತಮ್ಮ ಹತ್ತಿರ ಈ ವಿಷಯದ ಬಗ್ಗೆ ಮಾತನಾಡಿದೆ. ಸೂಕ್ಷ್ಮವಾಗಿ ಮಾತನಾಡಿ ಯಡಿಯೂರಪ್ಪನವರೇ ಎಂದು ತಾವು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳೊಡನೆ ಬೆಳಿಗ್ಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ಮಾನ್ಯ ಗೃಹ ಸಚಿವರೊಡನೆ ಮಾತನಾಡಿದ್ದೇನೆ. ಇವೊತ್ತು ನಾನು ಮಾತನಾಡಿರುವ 6-7 ನಿಮಿಷಗಳಲ್ಲಿ ಒಂದು ಶಬ್ದ ಅಥವಾ ಯಾವುದಾದರೂ ಹೆಸರನ್ನು ಹೇಳಿದ್ದೇನೆಯೇ ನೋಡಿ. ನಾನು ಏನು ಹೇಳಿದ್ದೇನೆ ಎಂದರೆ ನಿರಂತರವಾಗಿ ಈ ಘಟನೆ ನಡೆಯುತ್ತಿದೆ, ನಿನ್ನೆ ದಿವಸ ಮತ್ತೊಂದು ಘಟನೆ ನಡೆದಿದೆ, ಶಾಸಕರ ಮನೆಯ ಮೇಲೆ ಹಲ್ಲೆಯಾಗಿದೆ, ನೇಮಿಚಂದ್ ಎಂಬ ಎಲೆಕ್ಟ್ರಿಕ್ ಶಾಪ್‌ಗೆ 45 ಲಕ್ಷ ರೂಪಾಯಿ ಲುಕ್ಸಾನ್ ಆಗಿದೆ ಎಂದು ಹೇಳಿದ್ದೇನೆ. ಆ ಸಮಯದಲ್ಲಿ ಗೃಹ ಸಚಿವರು ಅದನ್ನು ರೆಫರ್ ಮಾಡಲಿಲ್ಲ. ಆಗ ಶ್ರೀ ನಂಜೇಗೌಡರು ನಿಂತುಕೊಂಡು ಪ್ರಸ್ತಾಪ ಮಾಡಿದಾಗ, ಎಷ್ಟು ಬೇಗನೆ ಇನ್‌ಫಾರ್ಮೆಷನ್ ಅವರಿಗೆ ಸಿಕ್ಕಿತು. ನಾನು ಒಂದು ವಿರೋಧ ಪಕ್ಷದ ನಾಯಕನಾಗಿದ್ದೇನೆ. ನನಗೂ ಸಮಾಜದಲ್ಲಿ ಎಲ್ಲರ ಬಗ್ಗೆ ಕಳಕಳಯಿದೆ. ಅದು ಇಲ್ಲದಿದ್ದರೆ ನಾನು ಇಲ್ಲಿ ನಿಂತುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ನಾನು ಆಗ ಹೇಳಿದಾಗ ಕೊನೆಯ ಪಕ್ಷ ಪೋಲೀಸ್ ಅಧಿಕಾರಿಗಳಿಗೆ ಹೇಳುತ್ತೇನೆ, ಸತ್ಯಾಂಶವನ್ನು ಪರಿಶೀಲನೆ ಮಾಡಿಸುತ್ತೇನೆಂದು ಹೇಳಬಹುದಿತ್ತು. ನಾಲ್ಕೈದು ದಿವಸ ಅಂಗಡಿ ಬಾಗಿಲಗಳು ತೆಗೆಯಲಿಲ್ಲ ಎಂದು ಹೇಳಿದಕ್ಕೆ, ಹೇಗೆ ತೆಗೆಯುತ್ತಾರೆ, ಹುಬ್ಬಳ್ಳಿಯಲ್ಲಿ ಮೂರು-ನಾಲ್ಕು ದಿವಸ ಹುಬ್ಬಳ್ಳಿಯಲ್ಲಿ ಬೆಂಕಿ ಉರಿಯುತ್ತಿದೆ....

ಅಧ್ಯಕ್ಷರು :- ಬೇಡಿ. ದಯಮಾಡಿ ನನ್ನ ಕಳಕಳಿಯನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಬಾಗಿಲು ಹಾಕಲು ಕಾರಣ ಮೂರು-ನಾಲ್ಕು ದಿವಸದಿಂದ ಅಲ್ಲಿ ವಾತಾವರಣ ಸರಿ ಇಲ್ಲದೇ ಇರುವುದರಿಂದ ಅಂಗಡಿಗಳ ಬಾಗಿಲಗಳನ್ನು ಯಾರೂ ತೆಗೆಯುತ್ತಿಲ್ಲ. ಇವನು ಒಬ್ಬನೇ ಅಲ್ಲ. ಬೇರೆ ಯಾವ ಅಂಗಡಿಗಳೂ ತೆಗೆದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಹೇಳುವಾಗ ಯಾರ ಯಾರ ಪ್ರಾಪರ್ಟಿ ಏನಾಗಿದೆ ಎಲ್ಲವನೂ ಹೇಳಿ ಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವೇನು ಮಾಡಿದಿರಿ- ಸ್ಪೆಸಿಫಿಕ್ ಆಗಿ ಒಂದು ಹೆಸರನ್ನು ಹೇಳಿದಿರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವನ ಆಶ್ರಯ ತೆಗೆದುಕೊಂಡು ನೀವು ಫ್ಲಾಗ್ ಹಾರಿಸಲು ಪ್ರಯತ್ನ ಮಾಡಿದ್ದುದು. ಸುಮ್ಮನೆ ಏತಕ್ಕೆ ಮಾತನಾಡುತ್ತೀರಿ ?

ಅಧ್ಯಕ್ಷರು :- ಈ ರೀತಿಯ ಸಂದರ್ಭ ಉಂಟಾಗುತ್ತದೆ ಎಂದೇ ನಾನು ಅದನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ ಎಂದು ಹೇಳಿದ್ದುದು. ಚರ್ಚೆಯ ಬಾರ್ಡರ್

ಲೈನ್ ದಾಟುವುದು ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಶಾಂತ ರೀತಿಯಿಂದ ನಡೆದದ್ದು ಇವರಿಗೆ ದು:ಖವಾಗಿದೆ.

ಅಧ್ಯಕ್ಷರು :- ಯಾರೂ ದು:ಖಪಡಬಾರದು. ಸಂತೋಷವಾದಾಗ ನಾವೆಲ್ಲರೂ ಸಂತೋಷ ಪಡಬೇಕು. ಅಶಾಂತಿ ಬಂದಾಗ ಯಾರು ಅದಕ್ಕೆ ಬಲಿಯಾಗುತ್ತಾರೋ ನಮಗೆ ಗೊತ್ತಾಗುವುದಿಲ್ಲ.

ಶ್ರೀ ಆರ್.ಎಲ್.ಜಾಲಪ್ಪ :- ನ್ಯಾಯಾಂಗ ತನಿಖೆಗೆ ಸರ್ಕಾರ ಒಪ್ಪಿಕೊಂಡಿದೆ. ಈಗಾಗಲೇ ಹೈಕೋರ್ಟಿಗೆ ಕಾಗದ ಬರೆದಿದ್ದೇವೆ. ಒಬ್ಬ ನ್ಯಾಯಾಧೀಶರನ್ನು ಕೊಡಿ ಎಂದು ಕೇಳಿದ್ದೇವೆ. ಏನಾದರೂ ಪ್ರಾಬ್ಲಮ್ಸ್ ಇದ್ದರೆ ಅವರ ಮುಂದೆ ಹೇಳಲಿ. ಇದರ ಬಗ್ಗೆ ಬೆಳಿಗ್ಗೆಯಿಂದ ಸಂಜೆಯವರೆಗೆ ಚರ್ಚೆ ಮಾಡುತ್ತಾ ಹೋದರೆ....

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ವಿರೋಧ ಪಕ್ಷದ ನಾಯಕನಾಗಿ ಬಜೆಟ್ ಬಗ್ಗೆ ಮಾತನಾಡಲು ರೆಡಿಯಾಗಿದ್ದೇನೆ. ಆದರೆ, ಈಗ ಬೆಂಗಳೂರಿನಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ. ಸೋಮವಾರ ಬೆಳಿಗ್ಗೆ ನಾನು ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರು :- ಸಮಯ ಏನು ಉಳಿಯುತ್ತದೆ ಎಂಬುದನ್ನು ನೀವೇ ಯೋಚನೆ ಮಾಡಿ.

ಶ್ರೀ ಹೆಚ್.ಡಿ.ದೇವೇಗೌಡ :- ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಒಂದು ನಿರ್ಣಯ ಆಗಿದೆ. ಸೋಮವಾರ ಏನು ಚರ್ಚೆಯಾಗಬೇಕು, ಮಂಗಳವಾರ ಏನು ಚರ್ಚೆಯಾಗಬೇಕೆಂದು ಎಲ್ಲಾ ನಿರ್ಧಾರವಾಗಿದೆ. ಆದರೆ ಸೋಮವಾರ ಏನು ಚರ್ಚೆ ಮಾಡಬೇಕು, ಮಂಗಳವಾರ ಏನು ಚರ್ಚೆ ಮಾಡಬೇಕು ಎಂಬುದು ಈ ಸದನಕ್ಕೆ ಸೇರಿದ್ದುದು. 29ನೇ ತಾರೀಖು ಬೆಳಿಗ್ಗೆ ವೋಟ್ ಆನ್ ಅಕೌಂಟ್‌ಗೆ ಈ ಸಭೆ ನಿರ್ಣಯ ಮಾಡುತ್ತದೆ. ಈ ಸಭೆ ಕಾಲವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಅದು ನನಗೆ ಸಂಬಂಧವಿಲ್ಲ. ಈ ಘಟನೆಯ ತೀರ್ಮಾನವನ್ನು ನಾವು ಒಪ್ಪಿಕೊಳ್ಳುತ್ತೇವೆ. 29ನೇ ತಾರೀಖು ಬೆಳಿಗ್ಗೆ 9.30ಕ್ಕೆ ವೋಟ್ ಆನ್ ಅಕೌಂಟ್ ಆಗಬೇಕಾಗುತ್ತದೆ.

ಶ್ರೀ ಹೆಚ್.ಡಿ.ದೇವೇಗೌಡ :- ಬೆಳಿಗ್ಗೆ ಒಂದು ವಿಷಯದ ಬಗ್ಗೆ ಹೇಳಿದ್ದಾರೆ. ಇದನ್ನು ವಿರೋಧ ಪಕ್ಷದ ನಾಯಕರಿಗೆ ಕಳುಹಿಸುತ್ತೇನೆ. ನಾವೇನೋ ಓಣಿ ಒಡೆಸಿ ರಸ್ತೆ ಮಾಡಿಸಿ ಶ್ರೀಮಂತರಿಗೆ ಕೊಡಲು ಹೊರಟಿದ್ದೇವೆ ಅಂತ.... ಈ ಎಸ್ಟಿಮೇಟನ್ನು ಇವೊತ್ತು ತಯಾರು ಮಾಡಿದ್ದಲ್ಲ, ಇದನ್ನು ಕಳುಹಿಸಿ ಕೊಡುತ್ತೇನೆ ಬೇಕಾದರೆ ನೋಡಿ

ವಾಪಸ್ಸು ಕಳುಹಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ಎಸ್ಟಿಮೇಟ್ ಕೊಡುವುದಕ್ಕೆ ಬದಲಾಗಿ ಆ ಎಸ್ಟಿಮೇಟ್ ಏತಕ್ಕೆ ಕೊಡುವುದಿಲ್ಲ ? ಅದಕ್ಕೋಸ್ಕರ ನನಗೆ ಅದು ಬೇಡ.

ಶ್ರೀ ಹೆಚ್.ಡಿ.ದೇವೇಗೌಡ :- ಆ ಸ್ಥಾನದ ಗೌರವ ಹಾಳು ಮಾಡುತ್ತಿದ್ದೀರಿ ನೀವು....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಮ್ಮ ಸ್ಥಾನದ ಗೌರವ ನಾನು ನೋಡಿದ್ದೇನೆ. ನಿಮ್ಮ ಬಾಯಿಯಿಂದ ಆ ಮಾತು ಬರಬಾರದು.

ಶ್ರೀ ಹೆಚ್.ಡಿ.ದೇವೇಗೌಡ :- ನಾನೂ ನೋಡಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ನಿಮಗೆ ಆ ಮಾತನ್ನು ಹೇಳುವುದಿಲ್ಲ.

ಶ್ರೀ ಹೆಚ್.ಡಿ.ದೇವೇಗೌಡ:- ಸ್ವಲ್ಪವಾದರೂ ಮಾನ ಮರ್ಯಾದೆ ಇರಬೇಕು...

ಶ್ರೀ ಬಿ.ಎಸ್.ಯಡಿಯೂರಪ್ಪ :- ನಾನೇನು ಹೇಳಿದೆ ಅಧ್ಯಕ್ಷರೇ ? ನಾನು ಏನು ಹೇಳಿದ್ದೇನೆ, ಅದು ರೆಕಾರ್ಡ್‌ಗೆ ಹೋಗಿದೆ. ಮುಖ್ಯ ಮಂತ್ರಿಗಳೇ ನಿಮಗೆ ಇದು ಗೌರವ ಅಲ್ಲ. ನಿಮ್ಮ ಬಾಯಿಯಿಂದ ಈ ಮಾತು ಬರಬಾರದಾಗಿತ್ತು. ನಾನು ಏನು ಹೇಳಿದೆ. ನನಗೆ ಅಧಿಕಾರ ಇದೆ. ನಾನು ಯಾವುದರ ಬಗ್ಗೆ ಬಡಿದಾಡುತ್ತಿದ್ದೇನೆ, ಆ ಎಸ್ಟಿಮೇಟ್ ಕೊಡಿ ಎಂದು ಕೇಳಿದೆ. ಅದೂ ಅಷ್ಟೇ ಮುಖ್ಯವಾದಂತಹ ಎಸ್ಟಿಮೇಟ್. ಇದನ್ನು ನೀವು ವಾಲಂಟರಿಯಾಗಿ ಕೊಡುತ್ತಿದ್ದೀರಿ, ಇದನ್ನು ತೆಗೆದುಕೊಂಡು ನಾನೇನು ಮಾಡಲಿ ?

ಶ್ರೀ ಹೆಚ್.ಡಿ.ದೇವೇಗೌಡ:- ನಾನು ಯಾರಿಗೋ ಕೊಡಲು ಹೋಗುತ್ತಿದ್ದೇನೆ ಎಂದು ಹೇಳಿದರೆ ಅದಕ್ಕೆ ಹೇಳಿದೆ ನಾನು.

ಶ್ರೀ ಬಿ.ಎಸ್.ಯಡಿಯೂರಪ್ಪ :- ಅದನ್ನೂ ಹೇಳಿದ್ದೇನೆ, ನೂರು ಕೋಟಿ ರೂಪಾಯಿ ಅವ್ಯವಹಾರ ಆಗಿದೆ ಎಂದು ನನಗೆ ಅನ್ನಿಸಿದೆ. ದಾಖಲೆ ಕೊಡಿ ಪರಿಶೀಲನೆ ಮಾಡುತ್ತೇನೆ ಎಂದರೆ ಅದನ್ನೇಕೆ ಕೊಡುವುದಿಲ್ಲ ?

ಶ್ರೀ ಹೆಚ್.ಡಿ.ದೇವೇಗೌಡ :- ನಾಳೆ ಬೆಳಿಗ್ಗೆ ಇದನ್ನು ಚರ್ಚೆಗೆ ತೆಗೆದುಕೊಳ್ಳಿ, ನಾನು ಇಡುತ್ತೇನೆ. ಅವರೇನಾದರೂ ಹೇಳಿದರೆ, ಈ ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಿ. ಈ ಸದನದಲ್ಲಿ ತೆಗೆದುಕೊಳ್ಳಿ ಅಂದೇ ನಾನು.

25 MARCH 1995

ಶ್ರೀ ಬಿ.ಎಸ್.ಯಡಿಯೂರಪ್ಪ :- ತಾವು ಕಡತವನ್ನು ತೆಗೆದುಕೊಂಡು ನೋಡಿ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿರುವುದು ಸರಿ ಎಂದು ಕಂಡು ಬಂದರೆ ತಾವು ಅದನ್ನು ಕಡತದಲ್ಲಿ ಇಡಬಹುದು.

ಒಬ್ಬ ಮಾನ್ಯ ಸದಸ್ಯರು :- ಬರೀ ಶಾಸಕರ ಪ್ರಿವಿಲೇಜು, ಗೌರವ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಇದೇನು ಸ್ವಾಮಿ ? ಬಡವರಿಗೆ ಅನ್ಯಾಯವಾಗುತ್ತಿದ್ದರೆ ಅದನ್ನು ಕೇಳಬಾರದೇ ನಾವು ? ನಮಗೆ ಅವಕಾಶ ಮಾಡಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಸಭಾ ನಾಯಕರು ಏತಕ್ಕೆ ಸಂಯಮ ಕಳೆದುಕೊಳ್ಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಹೆಚ್.ಡಿ.ದೇವೇಗೌಡ :- ವಿರೋಧ ಪಕ್ಷದ ನಾಯಕರು ಹೇಗೆ ನಡೆದುಕೊಳ್ಳಬೇಕು ? ನಿಮ್ಮ ಲಿಮಿಟೇಷನ್ನನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಜನ ಆಯ್ಕೆ ಮಾಡಿದ್ದಾರೆ. ನನ್ನ ಡ್ಯೂಟಿ ನನಗೆ ಗೊತ್ತಿದೆ. ಪ್ರತಿ ಕ್ಷಣದಲ್ಲಿ ವಿರೋಧ ಪಕ್ಷದ ನಾಯಕನಾಗಿ ಹೇಗೆ ನಡೆದುಕೊಳ್ಳಬೇಕು ಎಂದು ನಿಮ್ಮ ಬುದ್ಧಿವಾದ ಕೇಳಿ ನಾನು ನಡೆದುಕೊಳ್ಳಬೇಕೆ? ನಿಮ್ಮ ಇತಿ ಮಿತಿ ದಾಟಿ ನೀವು ನಮಗೆ ಹೇಳುವ ಅಧಿಕಾರ ಇಲ್ಲ. ಮಾನ್ಯ ಅಧ್ಯಕ್ಷರು ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ದಾಖಲೆಯನ್ನು ತರಿಸಿ ನೋಡಿ. ಆ ಮಾತು ಅವರಿಗೆ ಗೌರವ ತರತಕ್ಕ ಮಾತಾದರೆ....

ಶ್ರೀ ಜಿ.ವಿ.ರಾಮರೆಡ್ಡಿ :- ನಿನ್ನೆ ನಾವೆಲ್ಲರೂ ತಮ್ಮ ಕೋಣೆಯಲ್ಲಿ ಚರ್ಚೆ ಮಾಡಿ ಇವೊತ್ತು ಚರ್ಚೆ ಆಗಬೇಕಾದ ವಿಷಯದ ಬಗ್ಗೆ ನಿರ್ಣಯ ಮಾಡಿದ್ದೇವೆ. ಇದೇ ವಿಷಯ ಚರ್ಚೆ ಆಗುತ್ತಾ ಹೋದರೆ ಚರ್ಚೆ ಆಗಬೇಕಾದ ವಿಷಯ ಹಿಂದಕ್ಕೆ ಹೋಗುತ್ತದೆ. ಇದನ್ನು ತಾವು ಗಮನಿಸಬೇಕು.

ಅಧ್ಯಕ್ಷರು :- ನನಗೆ ವ್ಯಥೆಯಾಗುತ್ತದೆ. ಏನೆಂದರೆ ಸನದದ ಕಲಾಪಗಳ ಬಗ್ಗೆ ನಾವೆಲ್ಲರೂ ಸಮಯವನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು, ಎಂಬ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. ಕೆಲವು ಸಾರಿ ನಮ್ಮ ಕೈ ಮೀರಿ ಸ್ವಲ್ಪ ಸಮಯ ವ್ಯರ್ಥ ಆಗುತ್ತದೆ. ಮತ್ತೆ ನಾವು ಇವೊತ್ತು ಬಡ್ಜೆಟ್ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವುದಿಲ್ಲ ಎಂದರೆ ನಾಳೆ ಭಾನುವಾರ ಕುಳಿತುಕೊಳ್ಳಲು ಆಗುವುದಿಲ್ಲ; ಶನಿವಾರ ಕುಳಿತರೂ ನಮ್ಮ ಹಣೇ ಬರಹ ಇದಾದರೆ ನಮಗೆ ಎರಡು ದಿವಸ ಮಾತ್ರ ಉಳಿದಿರುತ್ತದೆ - 27 ಮತ್ತು 28ನೇ ತಾರೀಖು ಅಷ್ಟರಲ್ಲಿ ಚರ್ಚೆ ಮತ್ತು ಉತ್ತರ ಮುಗಿಯಬೇಕಾಗುತ್ತದೆ. 29ನೇ ತಾರೀಖು ಎಲ್ಲವನ್ನೂ ಮುಕ್ತಾಯ ಮಾಡಬೇಕಾಗುತ್ತದೆ. ಆರು ತಿಂಗಳುಗಳ ಕಾಲಕ್ಕೆ ಸದನದ ವತಿಯಿಂದ ಇಡೀ ರಾಜ್ಯದಲ್ಲಿ ಅವರು ಖರ್ಚು ಮಾಡಬಹುದಾದ ಹಣಕ್ಕೆ ಒಪ್ಪಿಗೆಯನ್ನು ಕೊಡತಕ್ಕ ವಿಚಾರದಲ್ಲಿ ಎರಡು ದಿವಸದಲ್ಲಿಯೇ ನಾವು ಚರ್ಚೆ ಮಾಡುತ್ತೇವೆ ಎಂದರೆ ಏನು

ಆ ಚರ್ಚೆ ಫಲಪ್ರದವಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಿ. ಆದರೆ ಈರೀತಿ ಉದ್ರೇಕಕ್ಕೊಳಗಾಗುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ತಾವೆಲ್ಲರೂ ಹಿರಿಯರಾಗಿದ್ದೀರಿ, ಅನುಭವಸ್ಥರಾಗಿದ್ದೀರಿ; ಪ್ರತಿ ಸಂದರ್ಭದಲ್ಲೂ ನಾವು ಅವರನ್ನು ತಡೆಯಲು ಆಗುವುದಿಲ್ಲ; ಅವರು ಬರೆಯುವುದನ್ನೆಲ್ಲಾ. ನಾವು ಎಡಿಟರ್ಸ್ ಅಲ್ಲ. ಪೇಪರ್‌ಗಳಲ್ಲಿ ಬಂದು ಇದೆಲ್ಲಾ ಹೊರಗೆ ಹೋದಾಗ ನಮ್ಮೆಲ್ಲರ ಬಗ್ಗೆ ಹೊರಗಿನವರಿಗೆ ಏನು ಅಭಿಪ್ರಾಯ ಬರುತ್ತದೆ ಎಂಬುದನ್ನು ತಾವು ಯೋಚನೆ ಮಾಡಿ. ನನ್ನ ವ್ಯಥೆ ಅದು. ಅದು ಆಗಬಾರದು ಎಂದು ನಾನು ಪ್ರತಿ ಹಂತದಲ್ಲೂ ನಾನು ಮಾತನಾಡಬೇಕಾದ ಅಗತ್ಯ ಇಲ್ಲದಿದ್ದರೂ ಸಹ ನಾನು ಪ್ರವೇಶ ಮಾಡಿ ಮಾತನಾಡುತ್ತಿರುವುದು ಆ ಒಂದು ಹಿನ್ನಲೆಯಲ್ಲಿಯೇ. ಆದ್ದರಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದನ್ನೆಲ್ಲಾ ಇಲ್ಲಿಗೆ ಮುಕ್ತಾಯ ಮಾಡೋಣ. ಯಾರ ಯಾರ ಬಗ್ಗೆ ಏನೂ ಆಕ್ಷೇಪಾರ್ಹ ಮಾತುಗಳನ್ನು ಆಡಿದರೆ ಅವುಗಳನ್ನು ನನ್ನ ಗಮನಕ್ಕೆ ತಂದರೆ ನಾನು ಅವುಗಳನ್ನು ಪರಿಶೀಲನೆ ಮಾಡುತ್ತೇನೆ. ಈಗ ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್:- ಖಾಸಗೀ ನಿರ್ಣಯವನ್ನು ಯಾವತ್ತು ತೆಗೆದುಕೊಳ್ಳುತ್ತೀರಿ. ನೀವು ಎಲ್ಲರ ಮೇಲಿನ ಕೋಪವನ್ನು ನನ್ನ ಮೇಲೆ ತೋರಿಸಿ ದಯವಿಟ್ಟು ಕೋಪ ಮಾಡಿಕೊಳ್ಳಬೇಡಿ.

ಅಧ್ಯಕ್ಷರು :- ನಾನು ಕೋಪದಲ್ಲಿ ಇದ್ದೇನೆಯೇ ? ನಾನು ನೋವಿನಲ್ಲಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ನಿಮ್ಮ ಕೋಪ ನನ್ನ ಮೇಲೆ ಎಲ್ಲಿ ಎರಗುತ್ತದೆಯೋ ಏನೋ ಎಂದು ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು :-. ಖಾಸಗೀ ನಿರ್ಣಯವನ್ನು ಮತ್ತೊಂದು ದಿವಸ ತೆಗೆದುಕೊಳ್ಳುತ್ತೇನೆ. ಈಗ ನಿಯಮ 60ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ. ಶ್ರೀಯುತರುಗಳಾದ: ಹೆಚ್.ಎನ್.ನಂಜೇಗೌಡ, ಎಸ್.ಸುರೇಶ್ ಕುಮಾರ್, ಶ್ರೀಮತಿ ಪ್ರಮೀಳಾ ನೇಸರ್ಗಿ ಹಾಗೂ ರಾಮಲಿಂಗ ರೆಡ್ಡಿಯವರುಗಳು ಬೆಂಗಳೂರಿನ ನಾಗರೀಕರಿಗೆ ಕುಡಿಯುವ ನೀರಿನ ತೀವ್ರ ಅಭಾವದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಚರ್ಚಿಸುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕೋರಮಂಗಲದಲ್ಲಿ ನಡೆದಿರತಕ್ಕ ಬೆಂಕಿ ಅನಾಹುತದ ಬಗ್ಗೆ ಸದನದ ನಾಯಕರು ಹೋಗಿ ಬರೋಣ ಎಂದು ಹಿಂದೆ ಹೇಳಿದ್ದರು. ಸಾಯಂಕಾಲದೊಳಗೆ ಮಾನ್ಯ ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರು ಅಲ್ಲಿಗೆ ಹೋಗಿ ಬರಬೇಕೆಂದು ನಿರ್ಣಯವಾಗಿತ್ತು. ಅದು ಆಗುತ್ತದೆಯೋ ಇಲ್ಲವೋ ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ :- ಅಲ್ಲಿ ಬೆಂಕಿ ಬಿತ್ತೆಂದು ಹೇಳಿ ಚರ್ಚೆಯಾದಾಗ, ಇಬ್ಬರೂ ಮಾಜಿ ಮುಖ್ಯ ಮಂತ್ರಿಗಳೂ ಇದ್ದಾರೆ, ಮಲ್ಲಿಕಾರ್ಜುನ ಖರ್ಗೆರವರು, ನಂಜೇಗೌಡರೂ ಇದ್ದಾರೆ, ನಾವೆಲ್ಲರೂ ಒಟ್ಟಿಗೆ ಹೋಗೋಣ ಎಂದು ಹೇಳಿದ್ದುದು ಇದರಲ್ಲಿ ಅಸತ್ಯ ಇದ್ದರೆ I am prepared to take the responsibility ಎಂದು ಹೇಳಿದೆ ನಾನು. 24 ಗಂಟೆಗಳಲ್ಲಿ ಅಲ್ಲಿ 168 ಮನೆಗಳನ್ನು ಕಟ್ಟಿಸಲಿಕ್ಕೆ ಮೊನ್ನೆ ಹೋದಾಗ ಎಸ್ಟಿಮೇಟ್ ರೆಡಿ ಮಾಡಿಸಿ ಕೆಲಸ ತೆಗೆದುಕೊಳ್ಳಲು ಹೋದಾಗ ಮತ್ತೊಂದು ಸಲಹೆ ಬಂತು. ತಮಿಳುನಾಡು ಮತ್ತು ಮಹಾರಾಷ್ಟ್ರ ಬಗ್ಗೆ ಹೇಳಿದಾಗ, ಯಾರೋ ಒಬ್ಬ ಓಣಿ ಒಡಿಸಿ ನ್ಯಾಶನಲ್ ಗೇಮ್ಸ್‌ಗೆ ಕೊಡಲಿಕ್ಕೆ ಎಂಬ ಆಪಾದನೆ ಬಂದಾಗ ಒಂದೂವರೆ ಕಿಲೋಮೀಟರ್ ದೂರ ಇದ್ದರೂ ಅದು ಇಲ್ಲ ಪಕ್ಕದಲ್ಲೆ ಇದೇ ಎಂದು ಹೇಳಿದಾಗ ಆ ಮಾತು ಬಂತು. ಮೊಯಿಲಿಯವರು, ನಂಜೇಗೌಡರೂ ಬರುವುದಾದರೆ ನಾನು ಬರಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ನಿಮ್ಮ ಜಗಳದಲ್ಲಿ.....

ಶ್ರೀ ಹೆಚ್. ಡಿ. ದೇವೇಗೌಡ :- ನಾವೂ ನೀವೂ ಎಲ್ಲರೂ ಕೆಲಸ ಮಾಡಿದ್ದೇವೆ. You are a part of the House.

ಶ್ರೀ ಬಿ. ಎಸ. ಯಡಿಯೂರಪ್ಪ :- ಈ ಸದನದಲ್ಲಿ ವಿರೋಧ ಪಕ್ಷದ ನಾಯಕ ಎಂದು ನಾನು ಇದ್ದೇನೆ, ಪ್ರಮುಖರು ನಾವಿದ್ದೇವೆ ಹಾಗಾಗಿ ಯಾರೋ ಒಬ್ಬರು ಬರುವುದಿಲ್ಲ ಎಂದರೆ ನಿಂತು ಹೋಗುತ್ತದೆ. ಸಭಾ ನಾಯಕರನ್ನು ಕೇಳುತ್ತಿದ್ದೇನೆ. ತಮ್ಮನ್ನು ಕೇಳುತ್ತಿದ್ದೇನೆ. ನಾನು ಒಂದು ಜವಾಬ್ದಾರಿ ಸ್ಥಾನದಲ್ಲಿದ್ದೇನೆ, ಇದು ಚರ್ಚೆಯಾಗುವುಂಥ ವಿಷಯ, ನನಗೆ ಒಂದು ಜವಾಬ್ದಾರಿ ಇದೆ. ತಮಗೆ ಬರಬಹುದು ಎನಿಸಿದರೆ ಬನ್ನಿ ಇಲ್ಲ ಯಡಿಯೂರಪ್ಪನವರೇ ಹೋಗುವುದು ಬೇಡ ಎಂದರೆ ನಮ್ಮದೇನೂ ಅಭ್ಯಂತರ ಇಲ್ಲ. ನಾನು ಅಧ್ಯಕ್ಷರನ್ನು ಕೇಳುತ್ತಿದ್ದೇನೆ. ಹಿಂದೆ ತಾವು ಏನು ಚರ್ಚೆ ನಡೆದಿದೆ ನೋಡಿ. ಇದು ನನ್ನ ಕರ್ತವ್ಯ.

ಅಧ್ಯಕ್ಷರು :- ನಾನು ಹೇಳುತ್ತೇನೆ ಕೇಳಿ. ನಿಮ್ಮಿಬ್ಬರ ಹಿತದೃಷ್ಟಿಯಿಂದ ನೀವಿಬ್ಬರನ್ನೇ ಹೋಗುವುದಕ್ಕೆ ನಾವು ಬಿಡುವುದಿಲ್ಲ. ನಿಮ್ಮ ಮಧ್ಯೆ ಮೊಯಿಲಿಯವರು ಮತ್ತು ಖರ್ಗೆಯವರು ಬರುವ ಹಾಗಿದ್ದರೆ ಮಾತ್ರ ನಿಮ್ಮನ್ನು ಕಳುಹಿಸುತ್ತೇನೆ....

ಶ್ರೀ ವಾಟಾಳ್ ನಾಗರಾಜ್ :- ಇಬರಿಬ್ಬರ ಮಧ್ಯೆ ಗೃಹ ಮಂತ್ರಿಗಳನ್ನು ಕಳುಹಿಸೋಣ. ಇಬರಿಬ್ಬರ ರಕ್ಷಣೆಗಾಗಿ ಅವರೇ ತಾನೇ ಬೇಕಾಗಿರುವುದು....

ಶ್ರೀ ಎಂ. ಶ್ರೀನಿವಾಸ್ :- ಈಗ ಮಾತನಾಡಿದಾಗ ಏನಾಯಿತು ಅವರು ಒಂದು ಕಿಲೋ ಮೀಟರ್ ದೂರದಲ್ಲಿದೆ ಎಂದು ಹೇಳಿದಾಗ ಇಲ್ಲ ನಾವು ಅರ್ಧ ಕಿಲೋ ಮೀಟರ್‌ನೊಳಗೆ ಇದೆ ಎಂದು ಹೇಳಿದೆವು. ಎಲ್ಲರೂ ಹೋಗಿ ನೋಡಿಕೊಂಡು ಬರೋಣ ಸತ್ಯಾಂಶ ಗೊತ್ತಾಗುತ್ತದೆ ಎಂಬುದಕ್ಕೆ ಒಪ್ಪಿಗೆ ಸಿಕ್ಕಿತು. ಈಗ ಆಗುವುದಿಲ್ಲ; ಅವರು ಬಂದರೆ ನೀವು ಎಂದು ಹೇಳುತ್ತಾರೆ. ಶಾಸಕರಾಗಿ ತಮಗೆ ಬರೆದು ಕೊಟ್ಟ

ಮೇಲೆ ನಾನು ಮಾತನಾಡಿದೆ. ಇಲ್ಲ ಎಂದು ಹೇಳಿದರೆ ಏನು ಅರ್ಥ ?

ಶ್ರೀ ಎಂ.ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೇ, ತಾವು ಬಹಳ ತಾಳ್ಮೆಯಿಂದ ಇದ್ದೀರಿ; ಆದರೆ ನಮಗೆ ಇಲ್ಲಿ ಕುಳಿತುಕೊಂಡು ಏನು ಆಗುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಏಕೆಂದರೆ ಬೆಳಿಗ್ಗೆಯಿಂದ ಈ ಒಂದು ವಿಷಯವನ್ನು ತೆಗೆದುಕೊಂಡರು. ನಾವು ಸುಮ್ಮನೆ ಇದ್ದೆವು, ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದೇವೆ. ಆಮೇಲೆ ಸನ್ಮಾನ್ಯ ಸಭಾನಾಯಕರು, ಮುಖ್ಯ ಮಂತ್ರಿಗಳು ಆ ಮನೆ ಯಾವ ರೀತಿಯಲ್ಲಿ ಕಟ್ಟಬೇಕು ಎಂದು ಹೇಳಿ ಆ ಸುಟ್ಟು ಹೋದಂಥ ಜಾಗಕ್ಕೆ ಎಸ್ಟಿಮೇಟನ್ನು ನಮಗೋ ತೋರಿಸಿದ್ದಾರೆ, ನಾವೂ ನೋಡಿದ್ದೇವೆ. ಇಲ್ಲಿ ಪ್ರಶ್ನೆ ಇರತಕ್ಕಂಥದ್ದು ಎರಡು. ಅವರಿಗೆ ಮನೆ ಕಟ್ಟಿ ಕೊಡಬೇಕು. ಅದು ಮುಖ್ಯ. ಆದರೆ ನಾವು ಬಂದು ಅಲ್ಲಿ ಏನು ಮಾಡುವುದಕ್ಕಾಗುತ್ತದೆ. ಎರಡನೆಯದಾಗಿ ಅಲ್ಲಿ ಯಾರೋ ಸುಟ್ಟಿದ್ದಾರೆ ಅವರೇ ಸುಟ್ಟಿದ್ದಾರೆ, ಮತ್ತೆ ಯಾರೋ ಸುಟ್ಟಿದ್ದಾರೆ ಎಂದು ಹೇಳಿ ಈ ವಿಚಾರ ಇದ್ದರೆ ಆ ಸತ್ಯಾಂಶವನ್ನು ಪೋಲೀಸರು ತನಿಖೆ ಮಾಡುತ್ತಾರೆ, ನಾವು ಅಲ್ಲಿ ಹೋಗಿ, ಯಾರು ಸುಟ್ಟಿದ್ದಾರೆ, ಯಾರಿಂದ ಸುಟ್ಹೋಗಿದೆ ಎಂದು ನಾವು ಹೋಗಿ ನೋಡಲಿಕ್ಕಾಗುವುದಿಲ್ಲ. ಮನೆ ಕಟ್ಟಿಕೊಡುವಂಥದ್ದು, ಕಾರ್ಪೊರೇಷನ್ ಇದೆ, ಇಂಜಿನಿಯರ್ಸ್ ಇದ್ದಾರೆ; ಅವರು ಮಾಡುತ್ತಾರೆ, ಇದರಲ್ಲಿ ನಮ್ಮ ಪ್ರವೇಶ ಏನು ? ಆದರಲ್ಲಿ ಬೇರೆ ಏನೋ ಕನೆಕ್ಷನ್ ಇದೆ ಎಂದು ಹೇಳುವುದಕ್ಕೆ, ಈ ಕನೆಕ್ಷನ್ ನೋಡಲಿಕ್ಕೆ ಸ್ಕಾಟ್‌ಲ್ಯಾಂಡ್ ಯಾರ್ಡ್‌ನಿಂದ ಒಂದು ಇಂಟಲಿಜೆನ್ಸ್ ಸ್ಕೀಂ ಕಳುಹಿಸಿಬಿಡಿ, ಏನಾದರೂ ಮಾಡಿಕೊಳ್ಳಲಿ.

ಶ್ರೀ ಹೆಚ್.ಡಿ.ದೇವೇಗೌಡ :- ರಸೆ ಮಾಡುತ್ತಿದ್ದಾರೆ ಎಂದು ಹೇಳಿದ್ದಕ್ಕೆ ನಾವು ಮಾಡುತ್ತಿಲ್ಲ ಎಸ್ಟಿಮೇಟ್ ಮಾಡಿಸಿ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಹೇಳಿದ್ದೆವು.

ಶ್ರೀ ಬಿ.ಮುನಿಯಪ್ಪ (ಗಾಂಧಿನಗರ) :- ಅಧ್ಯಕ್ಷರೇ, ಮಧ್ಯಾಹ್ನ ತಾವು ಇಲ್ಲದ ಸಂದರ್ಭದಲ್ಲಿ ಅಲ್ಲಿ 168-69 ಗುಡಿಸಲುಗಳು ಬೆಂಕಿಗೆ ಬಲಿಯಾಯಿತು ಅದನ್ನು ಕಟ್ಟಿಸಿ ಕೊಡುವಂಥ ವ್ಯವಸ್ಥೆಯನ್ನು ರೆಡಿ ಮಾಡುತ್ತಿದ್ದೇವೆ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಅಲ್ಲಿ ಯಾರೋ ಶ್ರೀಮಂತರ ಪರವಾಗಿಯೋ ಅಥವಾ ಅಲ್ಲಿಯಾವುದೋ ಕ್ರೀಡಾ ಗ್ರಾಮ ಮಾಡುವ ಸಲುವಾಗಿ ಒಕ್ಕಲೆಬ್ಬಿಸುವುದಕ್ಕೆ ಸುಟ್ಟರು ಎನ್ನುವ ಒಂದು ವಾದ ಬಂತು. ಈ ಎಸ್ಟಿಮೇಟ್ ಅವರಿಗೆ 18 ಲಕ್ಷ ರೂಪಾಯಿಗಳಲ್ಲಿ ಅದೇ ಸ್ಥಳದಲ್ಲಿ ಅವರಿಗೆ ಮನೆಯನ್ನು ಕಟ್ಟಿಕೊಡುವಂಥ ಪರಿಸ್ಥಿತಿ ಬರುವಾಗ ನಾವು ಯಾರೂ ಅಲ್ಲಿ ಹೋಗಿ ಪರಿಶೀಲನೆ ಮಾಡುವ ಅವಶ್ಯಕತೆ ಇಲ್ಲ ಎಂಬುದಾಗಿ ನಾನು ಹೇಳಿದ್ದೇನೆ. ಅಲ್ಲಿ ಅವರನ್ನು ಖಾಲಿ ಮಾಡಿ ಬೇರೆ ಕಡೆ ವರ್ಗ ಮಾಡಬೇಕಾದ ಪರಿಸ್ಥಿತಿ ಬಂದಾಗ ಅಲ್ಲಿ ಸರ್ಕಾರವೋ ಅಥವಾ ಅಲ್ಲಿ ಯಾರೋ ಶ್ರೀಮಂತರು ಅವರ ಗುಡಿಸಲುಗಳನ್ನು ಖಾಲಿ ಮಾಡಿಸುವುದಕ್ಕೆ ಸುಟ್ಟರು ಎಂಬುದಾಗ ವಾದ ಇರಬಹುದು. ಅದೇ ಜಾಗದಲ್ಲಿ ಅವರಿಗೆ ಎಸ್ಟಿಮೇಟ್ ರೆಡಿ ಮಾಡಿ ಮನೆ ಕಟ್ಟಿಸುವಂಥ ಸಂದರ್ಭ ಏನಿದೆ ಅದರಿಂದ ನಾವು ಯಾರೂ ಅಲ್ಲಿ

ಹೋಗುವಂಥ ಅವಶ್ಯಕತೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಅಧ್ಯಕ್ಷರೇ, ಕ್ಷಮಿಸಿ, ನಾನು ಎಚ್ಚರದಿಂದಲೇ ಮಾತನಾಡುತ್ತಿದ್ದೇನೆ. ಒಂದು ಕಿ.ಮಿ.ದೂರದಲ್ಲಿ ಬೆಂಕಿ ಹತ್ತಿಕೊಂಡು ಗುಡಿಸಲುಗಳು ಸುಟ್ಟಿದ್ದುದು ಎಂದು ಹೇಳಿದ್ದರಿಂದಲೇ ನಾನು ಆ ರೀತಿ ಹೇಳಿದ್ದುದು ನಮ್ಮ ಪ್ರಕಾರ ಅದು ಹತ್ತಿರದಲ್ಲಿದೆ.

(ಗೊಂದಲ)

ಶ್ರೀ ಎಂ.ವೀರಪ್ಪ ಮೊಯಿಲಿ :- ಅವರು ನಿಂತುಕೊಳ್ಳಲಿ, ನಾವು ಹೊರಗಡೆ ಹೋಗುತ್ತಿದ್ದೇವೆ. ಬೆಳಿಗ್ಗೆಯಿಂದ ಇದೇ ವಿಷಯ ಚರ್ಚೆಯಾಗುತ್ತಿದೆ. ಕುಡಿಯುವ ನೀರನ ಬಗ್ಗೆ ಇನ್ನೂ ಡಿಸ್‌ಕಷನ್ ಆಗಿಲ್ಲ. ಅಧ್ಯಕ್ಷರೆ, ನಮಗೆ ನೀವು ರಕ್ಷಣೆ ಕೊಡಬೇಕು. ಈ ರೀತಿ ಆದರೆ ಬ್ಲಡ್ ಪ್ರೆಷರ್ ಬಂದು ಬಿಡುತ್ತದೆ.

ಅಧ್ಯಕ್ಷರು :- ಅಧ್ಯಕ್ಷನಾದ ನಂತರ ನಾನೂ 25 ಎಂ.ಜಿ.ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದಾರೆ, ಈಗ ತೆಗೆದುಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ನಾವು ಸ್ಥಳ ತನಿಖೆ ಮಾಡಬೇಕೆಂದು ಹೋದಂಥಾದ್ದು ಸದಸ್ಯರುಗಳಾದ ಎಂ.ಶ್ರೀನಿವಾಸ ಮತ್ತು ಪ್ರಮೀಳಾ ನೇಸರ್ಗಿಯವರು ಎತ್ತಿದಂಥ ವಿಷಯಗಳಿಗೆ ಉತ್ತರ ಕೊಡಬೇಕಾದರೆ, ಆ ಸ್ಥಳದಿಂದ ಒಂದು ಕಿಲೋಮೀಟರ್ ದೂರವಿದ್ದು ಬೆಂಕಿ ಹತ್ತಿಕೊಂಡು ಗುಡಿಸಲು ಸುಟ್ಟವೆಯೆಂದು ಕೇಳಿದಾಗ ಅದು ಮೇನ್ ರೋಡಿನಿಂದ ತುಂಬಾ ಹತ್ತಿರದಲ್ಲಿದೆ, ನೀವು ಹೇಳಿದಷ್ಟು ಇಲ್ಲ ಎನ್ನುವುದು ಒಂದು ಮಾತು. ಕ್ರೀಡಾ ಸಮುಚ್ಚಯ ಕಟ್ಟುತ್ತಿರುವ ಕಡೆ ಈಗಲೂ 390 ಗುಡಿಸಲುಗಳಿವೆ, ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಿಲ್ಲ, ಇದನ್ನು ಪರಿಶೀಲಿಸಬೇಕೆಂಬ ಅಪೇಕ್ಷೆಯನ್ನು ನಾನು ವ್ಯಕ್ತಪಡಿಸಿದಾಗ ಹೋಗೋಣವೆಂದು ಹೇಳಿದರು. ವೀರಪ್ಪ ಮೊಯಿಲಿಯವರು ಹೇಳಿದಂತೆ ಮನೆಗಳನ್ನು ಕಟ್ಟುವುದನ್ನು ನೋಡುವುದಕ್ಕಾಗಲಿ ಅಥವಾ ಇನ್ನು ಏನೇ ಮಾಡುವುದಕ್ಕಾಗಲಿ ನಾವು ಹೋಗಬೇಕು ಎಂದು ಅಲ್ಲ. ಅವರೂ ಸಹ ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಹಾಗೂ ವಿರೋಧ ಪಕ್ಷದ ನಾಯಕರಾಗಿಯೂ ಕೆಲಸ ಮಾಡಿದ್ದಾರೆ. ಇಲ್ಲಿ ಏನೇನು ಚರ್ಚೆ ನಡೆದಿದೆಯೋ ಅದನ್ನೆಲ್ಲವನ್ನೂ ನಾವು ತೆಗೆಯಬಹುದು. ಮುಖ್ಯ ಮಂತ್ರಿಗಳ ಹತ್ತಿರ ನಾನು ಹಗುರವಾಗಿ ಮಾತನಾಡಿದೇನೇ ? ಇದನ್ನು ಕೊಡುತ್ತಿದ್ದೀರಲ್ಲಾ; ಅದನ್ನೂ ಸಹ ಕೊಡಿ ಎಂದು ಕೇಳಿದೆ. ಅವರಿಗೆ ಸಿಟ್ಟು ಏಕೆ ಬರಬೇಕು ?

ಅಧ್ಯಕ್ಷರು :- ಈಗ ಪುನ: ಹಿಂದಕ್ಕೆ ಬರುವುದು ಬೇಡ. ನಾನು ಏನು ಹೇಳುತ್ತಿದ್ದೇನೆಂದರೆ, ಕುಡಿಯುವ ನೀರು ಬೆಂಗಳೂರಿನ ನಾಗರಿಕರಿಗೆ ಸಂಬಂಧಪಟ್ಟಂಥ ಬಹಳ ಗಂಭೀರವಾದ ವಿಷಯ. ಇದರಲ್ಲೇನಾದರೂ ಆಕ್ಷೇಪಾರ್ಹವಾದ ಮಾತುಗಳಿದ್ದರೆ ನಾನು ಕಡತ ತರಿಸಿ ನೋಡುತ್ತೇನೆ.

ಖಂಡಿತವಾಗಿಯೂ ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ನಿಯಮ 69ರ ಮೇರೆಗೆ ---

ವಿಷಯ :- ಬೆಂಗಳೂರು ನಾಗರಿಕರಿಗೆ ಕುಡಿಯುವ ನೀರಿನ ತೀವ್ರ ಅಭಾವದಿಂದ ಉಂಟಾಗಿರುವ ಪರಿಸ್ಥಿತಿ. -----

ಶ್ರೀ ಎಚ್.ಎನ್.ನಂಜೇಗೌಡ (ಬಸವನಗುಡಿ) :- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಉಂಟಾಗಿರತಕ್ಕ ಕುಡಿಯುವ ನೀರಿನ ಅಭಾವದ ಪರಿಸ್ಥಿತಿ ಕುರಿತಂತೆ ಅಲ್ಪ ಕಾಲದ ಚರ್ಚೆಯನ್ನು ಪ್ರಾರಂಭಿಸುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ನಾನು ಈ ಚರ್ಚೆಯನ್ನು ಪ್ರಾರಂಭಿಸತಕ್ಕಂಥ ಕಾಲದಲ್ಲಿ ಹೆಚ್ಚಿನ ಸಮಯ ತೆಗೆದುಕೊಂಡು ಲಂಬಿಸಿ, ಅನಗತ್ಯವಾಗಿ ಮಾತನಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಇವೊತ್ತು ಸದನದ ಮುಂದೆ ಅಧಿಕೃತವಾಗಿ ಚರ್ಚೆಗೆ ಬಂದಿದ್ದರೂ ಕೂಡ ವಿಶೇಷವಾದ ಅನೇಕ ಸಂದರ್ಭಗಳಲ್ಲಿ ಮುಖ್ಯ ಮಂತ್ರಿಗಳ ಜೊತೆ, ಮತ್ತು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಈ ಮಂಡಳಿಯ ಅಧಿಕಾರಿಗಳೂ ಸಹ ತಮ್ಮ ಕೈಲಾದ ಮಟ್ಟಿಗೆ ಪ್ರಯತ್ನ ಮಾಡುತ್ತಿರತಕ್ಕಂಥಾದ್ದು ನಮ್ಮ ಕಣ್ಣಿಗೆ ಕಂಡು ಬಂದಿದೆ, ಅದನ್ನು ನಾನು ಅಲ್ಲಗೆಳೆಯುವುದಿಲ್ಲ. ಒಂದು ವಿಷಯವೇನೆಂದರೆ, ಮೊನ್ನೆ ತಾನೇ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದಂತೆ, 31ರೊಳಗೆ ಅದನ್ನು ಏರ್ಪಾಡು ಮಾಡತಕ್ಕಂಥ ಕಾರ್ಯ ಮಾಡುತ್ತೇವೆಂದು ಹೇಳಿದ್ದಾರೆ. ಬಹುಶ: ಅಷ್ಟು ಮಾಡಿದರೆ ಇರತಕ್ಕಂಥ ಕೆಪಾಸಿಟಿಯಲ್ಲಿ ಏನು ಮಾಡಬಹುದೋ ಅದನ್ನು ಮಂಡಳಿಯ ಅಧಿಕಾರಿಗಳೆಲ್ಲರೂ ಕುಳಿತುಕೊಂಡು ಮಾಡುತ್ತಾರೆ. ಇವೊತ್ತು ಬೆಂಗಳೂರು ನಗರ ವಿಶ್ವ ವಿಖ್ಯಾತವಾಗಿದ್ದು, ಮುಖ್ಯ ಮಂತ್ರಿಗಳು ಮತ್ತೆ ಇತರರು ಇತ್ತೀಚೆಗೆ ಹೊರ ದೇಶಗಳಿಗೆ ಹೋಗಿ ಬಂದ ನಂತರ ಈ ಬೆಂಗಳೂರು ನಗರಕ್ಕೆ ಇನ್ನು ಹೆಚ್ಚು ಪ್ರಾಮುಖ್ಯತೆ ಸಿಗುತ್ತಿದೆ. ಇಲ್ಲಿ ಏನಾಗಿದೆಯೆಂದರೆ, ಸಮಸ್ಯೆಯ ಮೂಲದ ಬಗ್ಗೆ ಅವರು ಏನು ಅರ್ಥ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ಹೊಸದಾಗಿ ಯಾವ ಲೇಔಟ್‌ಗಳನ್ನು ಮಾಡಿದ್ದಾರೆ, ಅದು ಜಯನಗರ ಇರಬಹುದು, ಜೆ.ಪಿ.ನಗರ ಇರಬಹುದು, ಇತ್ತೀಚೆಗೆ ಅಧಿಕೃತವಾಗಿ ಬಿ.ಡಿ.ಎ. ಮೂಲಕ ನಿರ್ಮಿಸಿರುವ ಹೊಸ ಬಡಾವಣೆಗಳೇನಿವೆ, ಆ ಬಡಾವಣೆಗಳಿಗೆ ನೀರನ್ನು ಸರಿಯಾಗಿ ಸರಬರಾಜು ಮಾಡುವ ವ್ಯವಸ್ಥೆ ಇದೆ. ಈ ಬಡಾವಣೆಗಳೆಲ್ಲಾ ನಾಗಾಲೋಟದಿಂದ ಬೆಳೆಯುತ್ತಿದ್ದು, ಜೊತೆಗೆ ಬಹು ಮಹಡಿಗಳನ್ನು ಕಟ್ಟುವುದಕ್ಕೆ ಅನುಮತಿ ಕೊಟ್ಟಿದ್ದಾರೋ ಗೊತ್ತಿಲ್ಲ. ನಾನು ಲ್ಯಾವೆಲಿ ರಸ್ತೆಯಲ್ಲಿ ವಾಸಿಸುತ್ತಿದ್ದು, 1975ನೇ ಇಸಿವಿಯಲ್ಲಿ ಅಲ್ಲಿಗೆ ಹೋದಾಗ, ಆ ಇಡೀ ರಸ್ತೆಯಲ್ಲಿ ಕ್ರಾಸ್ ರೋಡುಗಳೂ ಸೇರಿಕೊಂಡು 25 ಕಾರುಗಳೂ ಸಹ ಇರುತ್ತಿರಲಿಲ್ಲ. ಆದರೆ, ಅಲ್ಲಿ ಇವೊತ್ತು 2,000 ಕಾರುಗಳು ಇದ್ದು ಪರಿಸ್ಥಿತಿ ಏನಾಗಿದೆಯೆಂದು ನೀವೇ ಅರ್ಥ ಮಾಡಿಕೊಳ್ಳಬಹುದು. ಯಾವ ಮಟ್ಟದಲ್ಲಿ ಜನಸಂಖ್ಯೆ ಏರಿವೆ ಎಂದು ನೀವೇ ಅರ್ಥ ಮಾಡಿಕೊಳ್ಳಬಹುದು. ಅವೊತ್ತು ಯಾವುದೋ ಒಂದು ಜನಸಂಖ್ಯೆಗೆ ಸ್ಯೂವರೇಜ್ ಮತ್ತು ವಾಟರ್ ಲೈನ್